# ಪುರಸಭಾ   ಕಾರ್ಯಾಲಯ, ಮದ್ದೂರು

ನಂ:ಸಭೆ ಸಂಖ್ಯೆ 1/2008–09 ದಿನಾಂಕ: 02–04–2008

## ವಿಶೇಷ ಸಭಾ ಸೂಚನಾ ಪತ್ರ

ದಿನಾಂಕ: **05–04–2008** ನೇ ಶನಿವಾರ ಪೂರ್ವಾಹ್ನ **11–00** ಗಂಟೆಗೆ ಸರಿಯಾಗಿ ಪುರಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ ಎಸ್.ಎಂ.ಕೃಷ್ಣ ರವರ ಸಭಾಂಗಣದಲ್ಲಿ ವಿಶೇಷ ಸಭೆ ಕರೆಯಲಾಗಿದೆ. ಸಭೆಗೆ, ಮಾನ್ಯ ಅಧ್ಯಕ್ಷರು , ಉಪಾಧ್ಯಕ್ಷರು ಸದಸ್ಯರುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ಕೋರಲಾಗಿದೆ.

(ಸಹಿ)
ಮುಖ್ಯಾಧಿಕಾರಿ,
ಪುರಸಭೆ – ಮದ್ದೂರು.

## ಕಾರ್ಯಸೂಚಿ

**ವಿಷಯ 1**:–ಕಾರ್ಮಿಕ ನ್ಯಾಯಾಲಯ, ಉಪ ವಿಭಾಗ–2 ಮಂಡ್ಯ ರವರ ಪ್ರಕರಣ ಸಂಖ್ಯೆ ಡಬ್ಲೂಸಿಎ/ಎನ್ಎಫ್/ ಸಿಆರ್/140/06 ದಿನಾಂಕ:18–02–3008 ರ ಪತ್ರದ ಮೇರೆ , ಶ್ರೀ ರಾಜು ಬಿನ್ ಸಿದ್ದಪ್ಪ . ಚನ್ನೇಗೌಡ ಬಡಾವಣೆ ಮದ್ದೂರು ರವರಿಗೆ ವಿದ್ಯುತ್ ಅಪಘಾತ ಪರಿಹಾರದ ಹಣವನ್ನು ಪಾವತಿಸಲು ಆದೇಶ ವಾಗಿದ್ದು, ಈ ಬಗ್ಗೆ ಪುರಸಭೆ ವಕೀಲರಿಂದ ಬಂದಿರುವ ಕಾನೂನು ಸಲಹೆ ಪತ್ರದ ಮೇರೆ ಚರ್ಚಿಸುವ ವಿಚಾರ.

**ವಿಷಯ 2**:– ಮದ್ದೂರು ಪಟ್ಟಣದ ವಿವಿಧ ಭಾಗಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ಅನ್ಯಕ್ರಾಂತ ಮಂಜೂರು ಮಾಡುವ ಸಂಬಂಧ ಪುರಸಭೆಯ ಅಭಿಪ್ರಾಯ ಕೋರಿ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಬಂದಿರತಕ್ಕ ಅರ್ಜಿಗಳ ಬಗ್ಗೆ ಚರ್ಚಿಸುವ ವಿಚಾರ.

# ಪುರಸಭಾ  ಕಾರ್ಯಾಲಯ, ಮದ್ದೂರು

ನಂ: ಸಭೆ ಸಂಖ್ಯೆ 1/2008-09 ದಿನಾಂಕ: 01-04-2008

## ಆಯ – ವ್ಯಯ ಸಭಾ ಸೂಚನಾ ಪತ್ರ

ದಿನಾಂಕ: **11-04-2008ನೇ ಶುಕ್ರವಾರ** ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಪುರಸಭೆ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ **2008-09ನೇ ಸಾಲಿನ ಆಯ – ವ್ಯಯ (ಬಜೆಟ್)** ಸಭೆಯನ್ನು ಎಸ್.ಎಂ ಕೃಷ್ಣ ಸಭಾಂಗಣದಲ್ಲಿ ಕರೆಯಲಾಗಿದೆ. ಸದರಿ ಸಭೆಗೆ ಮಾನ್ಯ ಉಪಾಧ್ಯಕ್ಷರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರು, ಸದಸ್ಯರುಗಳು ಸಕಾಲಕ್ಕೆ ಆಗಮಿಸಲು ಕೋರಲಾಗಿದೆ.

(ಸಹಿ)
ಮುಖ್ಯಾಧಿಕಾರಿ,
ಪುರಸಭೆ- ಮದ್ದೂರು.

## ಕಾರ್ಯಸೂಚಿ

***ವಿಷಯ 1:-*** 2008-09ನೇ ಸಾಲಿನ ಆಯ -ವ್ಯಯ ಮುಂಗಡ ಪತ್ರವನ್ನು ಓದಿ , ಪರಿಶೀಲಿಸಿ ಮಂಜೂರು ಮಾಡುವ ವಿಚಾರ.

# ಪುರಸಭಾ   ಕಾರ್ಯಾಲಯ, ಮದ್ದೂರು

**ನಂ:ಸಭೆ ಸಂಖ್ಯೆ 1/2007-08** **ದಿನಾಂಕ:11-04-2008**

ದಿನಾಂಕ:11-04-2008ನೇ **ಶುಕ್ರವಾರ** ಬೆಳಿಗ್ಗೆ **11-00** ಗಂಟೆಗೆ ಸರಿಯಾಗಿ ಪುರಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ ಎಸ್. ಎಂ ಕೃಷ್ಣ ಸಭಾಂಗಣದಲ್ಲಿ ಉಪಾಧ್ಯಕ್ಷರು, ಸದಸ್ಯರುಗಳು ಸೇರಿ ನಡೆಸಿದ ಸಾಮಾನ್ಯ ಸಭೆಯ ನಡವಳಿಕೆಗಳು.

ಹಾಜರಿ -23 ಗೈರುಹಾಜರಿ – ಇಲ್ಲಾ ಜುಮ್ಲಾ – 23

*****

**ವಿಷಯ:** 1:- 2008-09ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರವನ್ನು ಓದಿ, ಪರಿಶೀಲಿಸಿ ಮಂಜೂರು ಮಾಡುವ ವಿಚಾರ.

**ತೀರ್ಮಾನ**:-2008-09ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರವನ್ನು ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಅಮರಬಾಬುರವರು ಈ ಕೆಳಕಂಡಂತೆ ಮಂಡಿಸಿದರು.

| | | | |
|---|---|---|---|
| ಪ್ರಾರಂಭಿಕ ಶುಲ್ಕ | - | ರೂ. | 3,27,68,531-00 |
| ನಿರೀಕ್ಷಕ ಆದಾಯ | - | ರೂ. | 4,17,93,150-00 |
| ಜುಮ್ಲಾ | - | ರೂ. | 7,45,61,681-00 |
| ನಿರೀಕ್ಷಕ ಖರ್ಚು | - | ರೂ. | 7,26,99,650-00 |
| ಉಳಿತಾಯ | - | ರೂ. | 18,62,031-00 |

ಶ್ರೀ ಎಸ್. ಚಂದ್ರರವರು ಮಾತನಾಡುತ್ತಾ ಪ್ರಕೃತಿ ವಿಕೋಪ ಪರಿಹಾರಕ್ಕೆ ರೂ. 20,000 ಇರುವುದನ್ನು ರೂ. 50,000/- ನಿಗಧಿಪಡಿಸುವಂತೆಯೂ ಹಾಗೂ ಸಾರ್ವಜನಿಕರುಗಳಿಗೆ ಕುಡಿಯುವ ನೀರಿನ ಸಮರ್ಪಕ ಪೂರೈಕೆಯ

ದೃಷ್ಟಿಯಿಂದ ನೀರು ಸರಬರಾಜು ಟ್ಯಾಂಕರ್ ಖರೀದಿಸಲು ಆಯ-ವ್ಯಯದಲ್ಲಿ 1 ಲಕ್ಷ ನಿಗಧಿಪಡಿಸಲು ಸೂಚಿಸಿದರು. ಇವರ ಸೂಚನೆಯನ್ನು ಶ್ರೀ ಅಂಕಪ್ಪ ಉ: ಚಂದ್ರ ರವರು ಅನುಮೋದಿಸಿದರು.

ಅಂತಿಮವಾಗಿ 2008-09ನೇ ಸಾಲಿನ ಆಯ-ವ್ಯಯವನ್ನು ಈ ಕೆಳಕಂಡಂತೆ ಸರ್ವಾನುಮತದಿಂದ ಒಪ್ಪಿ ಮಂಜೂರು ಮಾಡಲಾಯಿತು.

| | | | |
|---|---|---|---|
| ಪ್ರಾರಂಭಿಕ ಶುಲ್ಕ | - | ರೂ. | 3,27,68,531-00 |
| ನಿರೀಕ್ಷಕ ಆದಾಯ | - | ರೂ. | 4,17,93,150-00 |
| ಜುಮ್ಲಾ | - | ರೂ. | 7,45,61,681-00 |
| ನಿರೀಕ್ಷತ ಖರ್ಚು | - | ರೂ. | 7,28,29,650-00 |
| ಉಳಿತಾಯಿ | - | ರೂ. | 17,32,031-00 |

(ಸಹಿ)
ಅಧ್ಯಕ್ಷರು,
ಪುರಸಭೆ – ಮದ್ದೂರು.

" **ನಕಲು** "

ಮುಖ್ಯಾಧಿಕಾರಿ,
ಪುರಸಭೆ – ಮದ್ದೂರು.

2008–09ನೇ ಸಾಲಿಗೆ ಮದ್ದೂರು ಪುರಸಭೆಯ ಆಯ–ವ್ಯಯದ ಪ್ರಮುಖ ಅಂಶಗಳು,

ಪುರಸಭೆಗೆ 2008–09ನೇ ಸಾಲಿಗೆ ನಿರೀಕ್ಷಕ ಪ್ರಮುಖ ಆದಾಯಗಳ ಹಾಗೂ ಖರ್ಚುಗಳು ಮೂಲ ವಿವರ.

| ವಿವರ | ಮೊತ್ತ |
|---|---|
| 1) ಅಂಗಡಿ ಮತ್ತು ಮಳಿಗೆಗಳ ಬಾಡಿಗೆಯಿ0ದ | 3,00,000–00 |
| 2) ಕಟ್ಟಡಗಳ ಪರವಾನಿಗೆಯಿಂದ | 2,20,000–00 |
| 3) ಅಭಿವೃದ್ಧಿ ಶುಲ್ಕಗಳಿಂದ | 2,00,000–00 |
| 4) ಉದ್ದಿಮೆ ಪರವಾನಿಗೆಗಳಿಂದ | 1,12,000–00 |
| 5) ಬೀದಿ ದೀಪಗಳ ನಿರ್ವಹಣೆಗೆ ಸರ್ಕಾರದಿಂದ ಅನುದಾನ | 20,00,000–00 |
| 6) ವಿವಿಧ ಬಾಬುಗಳ ಹರಾಜು ಮೂಲಕ , | 6,00,000–00 |
| 7) ನೀರು ಸರಬರಾಜು ನಿರ್ವಹಣೆಗೆ ಸರ್ಕಾರದಿಂದ ಎಸ್.ಎಫ್.ಸಿ.ಅನುದಾನ | 30,00,000–00 |
| 8) ಸಾರ್ವಜನಿಕರುಗಳಿಗೆ ನೀರು ಸರಬರಾಜು ಶುಲ್ಕ ವಸೂಲಾತಿ | 17,91,000–00 |
| 9) ಸಾರ್ವಜನಿಕ ಸಂಪರ್ಕ ನೀಡಲು ಪಡೆಯುವ ಶುಲ್ಕ | 1,00,000–00 |
| 10) ಸಿಬ್ಬಂದಿ ವರ್ಗಕ್ಕೆ ವೇತನ ಪಾವತಿಗೆ ಸರ್ಕಾರದ ಅನುದಾನ | 60,50,000–00 |
| 11) ಅಭಿವೃದ್ಧಿ ಅನುದಾನ(ಸರ್ಕಾರದಿಂದ) | 1,13,75,000–00 |
| 12) ಬ್ಯಾಂಕಿನಿಂದ ಬಡ್ಡಿ ನಿರೀಕ್ಷ | 2,10,000–00 |
| 13) ಆಸ್ತಿ ತೆರಿಗೆ ಮೂಲಕ | 21.00,000–00 |
| 14) ಇನ್ನಿತರೆ ಮೂಲಗಳಿಂದ | 19,14,000–00 |
| ನಿರೀಕ್ಷಕ ಆದಾಯ ಜುಲ್ಲಾ | 2,99,72,000/– |

## ಖರ್ಚುಗಳು  ಮೂಲ ವಿವರ.

| ವಿವರ | ಮೊತ್ತ |
|---|---|
| 1) ಸಿಬ್ಬಂದಿ ವರ್ಗದವರುಗಳಿಗೆ ವೇತನ ಮತ್ತು ಭತ್ಯಗಳು | 60,00,000–00 |
| 2) ಬೀದಿ ದೀಪಗಳು ವಿದ್ಯುತ್ ವೆಚ್ಚ | 20,00,000–00 |
| 3) ವಿದ್ಯುತ್ ಬೀದಿ ದೀಪಗಳ ನಿರ್ವಹಣೆಗಾಗಿ | 10,00,000–00 |
| 4) ನೀರು ಸರಬರಾಜು ನಿರ್ವಹಣೆ ವೆಚ್ಚ | 30,00,000–00 |
| 5) ಕಟ್ಟಡಗಳ ದುರಸ್ತಿಗಾಗಿ | 11.00,000–00 |
| 6) ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ | 20,00,000–00 |
| 7) ಸ್ವಾಗತ ನಾಮಫಲಕಗಳು ಮತ್ತು ಇತರೆ ನಾಮಫಲಕಗಳು | 10,50,000–00 |
| 8) ರಸ್ತೆಗಳ ಮತ್ತು ಫುಟ್‌ಪಾತ್ಗಳ ನಿರ್ಮಾಣ | 14,00,000–00 |
| 9) ರಸ್ತೆ ಬೀದಿ ಚರಂಡಿ ನಿರ್ಮಾಣಕ್ಕೆ ಕಲ್ವರ್ಟ್, ನಿರ್ಮಾಣಕ್ಕೆ | 27,00,000–00 |
| 10) ನೈರ್ಮಲೀಕರಣ ವೆಚ್ಚ | 23,50,000–00 |
| 11) ಆಧುನಿಕ ಮಾರುಕಟ್ಟೆ ನಿರ್ಮಾಣ | 40,00,000–00 |
| 12) ಉದ್ಯಾನವನಗಳ ಅಭಿವೃದ್ಧಿ | 8,50,000–00 |
| 13) ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡವರ ಶ್ರೇಯಾಭಿವೃದ್ಧಿಗಾಗಿ | 6,60,000–00 |
| ಒಟ್ಟು ಖರ್ಚು | 2,81,10,000–00 |
| ಒಟ್ಟು ಆದಾಯ<br>ಆಖೈರು ಶಿಲ್ಕು(ಉಳಿತಾಯ) | 2,99,72,000–00<br>18,62,000–00 |

# ಪುರಸಭಾ ಕಾರ್ಯಾಲಯ, ಮದ್ದೂರು

ನಂ: ಸಭೆ ಸಂಖ್ಯೆ–2/2008–09 ದಿನಾಂಕ:24–05–2008

## ಸಭಾ ಸೂಚನಾ ಪತ್ರ

ದಿನಾಂಕ:31–05–2008ನೇ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಪುರಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ ಎಸ್. ಎಂ ಕೃಷ್ಣ ಸಭಾಂಗಣದಲ್ಲಿ ಉಪಾಧ್ಯಕ್ಷರು, ಸದಸ್ಯರುಗಳು ಸೇರಿ ನಡೆಸಿದ ಸಾಮಾನ್ಯ ಸಭೆಯ ನಡವಳಿಕೆಗಳು.

ಹಾಜರಿ –23 ಗೈರುಹಾಜರಿ – ಇಲ್ಲಾ ಜುಮ್ಮಾ – 23

(ಸಹಿ)
ಮುಖ್ಯಾಧಿಕಾರಿ,
ಪುರಸಭೆ – ಮದ್ದೂರು.

## ಕಾರ್ಯಸೂಚಿ

ವಿಷಯ:–2 ದಿನಾಂಕ: 31–03–2008 ರಂದು ನಡೆದ ಸಾಮಾನ್ಯ ಸಭೆ ಹಾಗೂ ದಿನಾಂಕ: 11–04–2008 ರಂದು ನಡೆದ ಆಯ–ವ್ಯಯ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವುದು.

ವಿಷಯ:–3 2008ನೇ ಏಪ್ರಿಲ್ ಮಾಹೆಯ ಜನನ –ಮರಣ ವರದಿಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.
ಜನನ–69 ಮರಣ–18 ಜುಂಲ್ಲಾ –87

ವಿಷಯ:–4 2008ನೇ ಏಪ್ರಿಲ್ ಮಾಹೆಯ ಜಮಾ ಖರ್ಚು ವಿವರವನ್ನು ಓದಿ ಅಂಗೀಕರಿಸುವ ವಿಚಾರ.

ವಿಷಯ:–5 ದಿನಾಂಕ: 24–05–2008 ರಂದು ನಡೆದ ಸ್ಥಾಯಿ ಸಮಿತಿ ಸಭೆ ನಡವಳಿಕೆಗಳನ್ನು ಓದಿ ಅನುಮೋದಿಸುವ ವಿಚಾರ.

ವಿಷಯ:–6 ಕಾರ್ಮಿಕ ನ್ಯಾಯಾಲಯ, ಉಪ ವಿಭಾಗ–2 ಮಂಡ್ಯ ರವರ ಪ್ರಕರಣ ಸಂಖ್ಯೆ ಡಬ್ಲುಸಿಎ ಎನ್ ಎಫ್.ಸಿ/ಸಿಆರ್ 140 /06 ದಿನಾಂಕ: 18–02–2008ರ ಪತ್ರದ ಮೇರೆ ಶ್ರೀ ರಾಜು ಬಿನ್ ಸಿದ್ದಪ್ಪ ಚನ್ನೇಗೌಡ ಬಡಾವಣೆ ಮದ್ದೂರು ರವರಿಗೆ ವಿದ್ಯುತ್ ಅಪಘಾತ ಪರಿಹಾರದ ಹಣವನ್ನು

ಪಾವತಿಸಲು ಆದೇಶವಾಗಿದ್ದು ಈ ಬಗ್ಗೆ ಪುರಸಭೆ ವಕೀಲರಿಂದ ಬಂದಿರುವ ಕಾನೂನು ಸಲಹೆ ಪತ್ರದ ಬಗ್ಗೆ ಚರ್ಚಿಸುವ ವಿಚಾರ.

ವಿಷಯ:–7 ಅನಧಿಕೃತವಾಗಿ ಕೊಳಾಯಿ ಸಂಪರ್ಕ ಪಡೆದಿರುವ ಖಾತಾದಾರರುಗಳಿಂದ ದಂಡ ಶುಲ್ಕ ವಸೂಲಿ ಮಾಡಿ ಸಕ್ರಮಗೊಳಿಸುವ ಬಗ್ಗೆ ಚರ್ಚಿಸುವ ವಿಚಾರ.

ವಿಷಯ:–8 :ಪುರಸಭೆಯಲ್ಲಿ ಖಾತೆ ದಾಖಲಾಗದೆ ಇರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅನಾಕ್ಷೇಪಣಾ ಪತ್ರ ನೀಡುವ ಬಗ್ಗೆ ಚರ್ಚಿಸುವ ವಿಚಾರ.

ವಿಷಯ:–9 ಪುರಸಭೆಯಲ್ಲಿ ಖಾತೆ ದಾಖಲಾಗಿ ಸ್ವತ್ತಿಗೆ ಹೊಂದಿಕೊಂಡಂತೆ ಇರುವ ಪುರಸಭೆಗೆ ಸೇರಿದ ನಿವೇಶನಗಳನ್ನು ಕಿಮ್ಮತ್ತು ಧರಕ್ಕೆ ಅರ್ಹರಿಗೆ ನೀಡುವ ಬಗ್ಗೆ ಚರ್ಚಿಸುವ ವಿಚಾರ.

ವಿಷಯ:–10 ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಪೌನಿ/ಯುಪಿಎ/ ಸ್ವಜಯೋ/ಸಿಆರ್/16/2007–08 ದಿನಾಂಕ:31–03–2008 ರಂತೆ ಎಸ್.ಜೆ.ಎಸ್.ಆರ್.ವೈ.ಯೋಜನೆಯ ಚಟುವಟಿಕೆಗಳಾದ ಸಮುದಾಯ ಅಭಿವೃದ್ಧಿ ಸಂಘದ ಸಭೆಗಳಿಗೆ, ತರಬೇತಿಗಳಿಗೆ, ಗುಂಪುಗಳ ಕಾರ್ಯ ಚರ್ಚಿಸಲು ಸಮುದಾಯ ಭವನ ನಿರ್ಮಿಸಲು ಪುರಸಭಾ ಸ್ಥಳದ ಜಾಗದ ಪೂರ್ಣವಿವರ ಹಾಗೂ ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಅಂದಾಜನ್ನು ತಯಾರಿಸಿ ಕಳುಹಿಸಲು ಕೋರಿದ್ದು ಚರ್ಚಿಸುವ ವಿಚಾರ.

ವಿಷಯ:–11 ಶಿವಪುರದ ನೀರು ಸರಬರಾಜು ವಸತಿ ಗೃಹದ ಬಳಿ 10ನೇ ಹಣಕಾಸು ಯೋಜನೆಯಡಿ ನಿರ್ಮಿಸಿರುವ ಪುರಸಭೆಯ 11 ಸಂಖ್ಯೆ ಅಂಗಡಿ ಮಳಿಗೆಗಳ ಅವಧಿ ಮುಗಿದಿದ್ದು, ಮರು ಹರಾಜು ಮಾಡಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ವಿಷಯ:–12 ಮದ್ದೂರು ಟೌನ್ ಕೆ.ಇ.ಬಿ ಪಕ್ಕದಲ್ಲಿ ನಿರ್ಮಾಣಗೊಂಡು ಬಾಡಿಗೆ ನೀಡಿರುವ ಕಾಲಾವಧಿ 09–07–2008ಕ್ಕೆ ಮುಕ್ತಾಯಗೊಳ್ಳಲಿದ್ದು, ಸದರೀ ಅಂಗಡಿ ಮಳಿಗೆಗಳನ್ನು ಮರು ಹರಾಜು ಮಾಡಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ವಿಷಯ:–13 ಶ್ರೀ ಅಜೀಜ್ ಖಾನ್ ಬಿನ್ ಬೀರಾಂಖಾನ್ ಮುಸ್ಲಿಂ ಬ್ಲಾಕ್ ಮದ್ದೂರು ಟೌನ್ ರವರು ದಿನಾಂಕ: 22–04–2008 ರಂದು ಮನವಿ ಸಲ್ಲಿಸಿ ದಿನಾಂಕ: 30–03–2008 ರಂದು ನಡೆದ ವಿದ್ಯುತ್‌ಚ್ಛಕ್ತಿ ಅಪಘಾತದಲ್ಲಿ ತನ್ನ ಮಗ ಮೃತನಾಗಿದ್ದು,ಪರಿಹಾರ ಕೊಡಿಸಿ ಕೊಡಲು ಕೋರಿದು, ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ವಿಷಯ:–14 ಅಧ್ಯಕ್ಷರು ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸಂಘ (ರಿ) ಮದ್ದೂರು ರವರು ದಿನಾಂಕ: 03–03–2008 ರಂದು ಮನವಿ ಸಲ್ಲಿಸಿ ಶ್ರೀ ಶನೀಶ್ವರ ಸ್ವಾಮಿಯ ದೇವರ ಜಾತ್ರೆ ಅಂಗವಾಗಿ ನಡೆದ ಸಮಾರಂಭಕ್ಕೆ ಧನ ಸಹಾಯ ಕೋರಿ ಸಲ್ಲಿಸಿರುವ ಮನವಿ ಬಗ್ಗೆ ಚರ್ಚಿಸುವ ವಿಚಾರ.

ವಿಷಯ:–15 ಪ್ರತಿ ಮನೆ ಮನೆಗಳಿಂದ ಕಸ ಸಂಗ್ರಹಿಸಲು ಸರ್ಕಾರದ ಆದೇಶ ಸಂ: ನಅಇ23, ಟಿಸಿಟಿ 2004 ದಿನಾಂಕ:06–01–2005ರಂತೆ ಪ್ರತಿ ಮನೆಯಿಂದ ರೂ.20–00 ಪ್ರತಿ ಅಂಗಡಿಗಳಿಂದ ರೂ.50–00 , ಪ್ರತಿ ಹೋಟೆಲ್ ಗಳಿಂದ ರೂ.100–00 ಹಾಗೂ ಪ್ರತಿ ಕಲ್ಯಾಣ ಮಂಟಪಗಳಿಂದ ರೂ.250–00

ಮತ್ತು ಪ್ರತಿ ಕಾರ್ಯಕ್ರಮಕ್ಕೆ ರೂ. 200–00 ಗಳನ್ನು ಬಳಕೆ ಶುಲ್ಕ (USER FEE) ನಿಗಧಿಪಡಿಸಿದ್ದು, ಈ ಸಂಬಂಧ ತೀರ್ಮಾನ ಕೈಗೊಳ್ಳುವ ಬಗ್ಗೆ.

ವಿಷಯ:– ಅಧ್ಯಕ್ಷರ ಅಪ್ಪಣೆ ಮೇರೆ ಚರ್ಚೆಗೆ ಬರಬಹುದಾದ ಇತರೆ ವಿಷಯಗಳು

# ಪುರಸಭಾ ಕಾರ್ಯಾಲಯ, ಮದ್ದೂರು

**ನಂ:ಸಭೆ ಸಂಖ್ಯೆ 16/2007–08** **ದಿನಾಂಕ: 31–03–2008**

ದಿನಾಂಕ:31–03–2008ನೇ ಸೋಮವಾರ ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಪುರಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಎಂ ಕೃಷ್ಣ ರವರ ಸಭಾಂಗಣದಲ್ಲಿ ಉಪಾಧ್ಯಕ್ಷರು, ಸದಸ್ಯರುಗಳು ಸೇರಿ ನಡೆಸಿದ ಸಾಮಾನ್ಯ ಸಭೆಯ ನಡವಳಿಕೆಗಳು.

ಹಾಜರಿ –23 ಗೈರುಹಾಜರಿ – ಇಲ್ಲಾ ಜುಮ್ಮಾ – 23

**ವಿಷಯ:–** 49 : ಪುರಸಭೆಗೆ ಸ್ಥಾಯಿ ಸಮಿತಿ ರಚಿಸುವ ವಿಚಾರ .

**ತೀರ್ಮಾನ: 49:–** ಸ್ಥಾಯಿ ಸಮಿತಿಗೆ ಈ ಕೆಳಕಂಡಂತೆ 7ಜನ ಸದಸ್ಯರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

1) ಶ್ರೀ ಎಂ.ಪಿ.ಅಮರಬಾಬು – ಸದಸ್ಯರು
2) ಶ್ರೀ ಎಂ. ರಮೇಶ್ – ಸದಸ್ಯರು
3) ಶ್ರೀಮತಿ ಲಲಿತಮ್ಮ – ಸದಸ್ಯರು
4) ಶ್ರೀ ಕೆ.ಆರ್.ರವಿ – ಸದಸ್ಯರು
5) ಶ್ರೀ ಎಂ.ಪಿ.ಪ್ರವೀಣ್ – ಸದಸ್ಯರು
6) ಶ್ರೀ ಕೆ.ವಿ. ಸಂಪಂಗಿರಾಮಯ್ಯ – ಸದಸ್ಯರು
7) ಶ್ರೀಮತಿ ಹೆಚ್. ಎಸ್.ನಾಗಮಣಿ – ಸದಸ್ಯರು

ಇವರುಗಳಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀ ಎಂ.ಪಿ. ಅಮರಬಾಬು ರವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಸಭೆಯಲ್ಲಿ ಘೋಷಿಸಲಾಯಿತು.

**ವಿಷಯ:–50** ದಿನಾಂಕ: 07–03–2008 ರಂದು ನಡೆಯಲಿರುವ 2008–09ನೇ ಸಾಲಿನ ವಿವಿಧ ಹಕ್ಕುಗಳ ಬಹಿರಂಗ ಹರಾಜನ್ನು ಚರ್ಚಿಸಿ ಅನುಮೋದಿಸುವ ವಿಚಾರ.

**ತೀರ್ಮಾನ: 50:–** ದಿನಾಂಕ:07–03–2008 ರಂದು ನಡೆದ 2008–09 ಬಹಿರಂಗ ಹರಾಜು ಅಂತಿಮವಾಗಿ ಈ ಕೆಳಕಂಡಂತೆ ಇರುತ್ತೆ.

1) ಸಂತೆ ಮಸೂಲಾತಿ ಹಕ್ಕು ಶ್ರೀ ರಾಮಚಂದ್ರ , ರೂ.1,35,100–00

2) ಖಾಸಗಿ ಬಸ್ ನಿಲ್ದಾಣದ ಶುಲ್ಕ ಶ್ರೀ ದೇವರಾಜು
ವಸೂಲಾತಿ ಹಕ್ಕು ರೂ.2,61,000–00

3) ದಿನವಹಿ ನೆಲಬಾಡಿಗೆ ಶ್ರೀ ಬಸವರಾಜು
ವಸೂಲಾತಿ ಹಕ್ಕು ರೂ.1,30,000–00

ಕಳೆದ ಸಾಲಿಗಿಂತ ಹೆಚ್ಚಾಗಿ ವಿವಿಧ ಬಿಡುಗಳು ಹೋಗಿದ್ದು ಹರಾಜನ್ನು ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಲಾಯಿತು.

**ವಿಷಯ:–51:–** ಮದ್ದೂರು ಪುರಸಭೆಗೆ ಕ್ರಿಯಾ ಯೋಜನೆಯ ಪ್ರಕಾರ ದ್ವಿತೀಯ ಹಂತದ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ 30 ಘ.ಮೀ. ಕಂಟ್ಸೆನರ್, 3ಸಂಖ್ಯ 4.5 ಘ.ಮೀ. ಕಂಟ್ಸೆನರ್ 3 ಸಂಖ್ಯೆ ಮತ್ತು ಒಂದು ಟ್ರಾಕ್ಟರ್ ಪ್ಲೇಸರ್ ವಾಹನವನ್ನು ಮಂಜೂರು ಮಾಡಲಾಗಿದ್ದು, ಪುರಸಭೆಯ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಮೇಲ್ಕಾಣಿಸಿದ ಸಾಧನ ಸಲಕರಣಗಳು ಮತ್ತು ವಾಹನಗಳು ಪುರಸಭೆಗೆ ಸರಬರಾಜು ಆಗುವ ಹಂತದಲ್ಲಿರುತ್ತದೆ. ಆದರೆ ಮದ್ದೂರು ಪುರಸಭೆಗೆ ನೆಲಭರ್ತಿ ಜಾಗವು ಲಭ್ಯವಿಲ್ಲದ್ದರಿಂದ ಮಂಡ್ಯ ನಗರಸಭೆಯ ನೆಲಭರ್ತಿ ಜಾಗದಲ್ಲಿಯೆ ವಿಲೇವಾರಿ ಮಾಡುವ ಬಗ್ಗೆ ದಿನಾಂಕ:30–04–2007 ರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಎರಡು ನಗರ ಸ್ಥಳೀಯ ಸಂಸ್ಥೆಗಳ ದಿನಾಂಕ:4–12–2007 ರಂದು ಪರಿಸ್ಪರ ಒಪ್ಪಂದ ಮಾಡಿ ಕೊಳ್ಳಲಾಗಿರುತ್ತದೆ. ದಿನಾಂಕ: 25–01–2008 ರಂದು ನಡೆದ ಸಭೆಯಲ್ಲಿ ಕಂಟೈನರ್‌ಗಳು ಮತ್ತು ಟ್ರಾಕ್ಟರ್ ಪ್ಲೇಸರ್ ವಾಹನವು ಶ್ರೀರಂಗಪಟ್ಟಣ ಪುರಸಭೆಗೆ ಕ್ರಿಯಾಯೋಜನೆಯ ಪ್ರಕಾರ ಬೇಕಾಗಿದ್ದು ಪುರಸಭೆಯ ಈ ವಾಹನ ಮತ್ತು ಸಲಕರಣೆಗಳನ್ನು ಇನ್ನು ಖರೀದಿ ಮಾಡಿಲ್ಲದಿರುವುದರಿಂದ ಮದ್ದೂರು ಪುರಸಭೆಯ ಖರೀದಿ ಆದೇಶ ನೀಡಲಾಗಿರುವ ಮೇಲ್ಕಾಣಿಸಿದ ವಾಹನ ಮತ್ತು ಕಂಟೈನರ್ ಗಳನ್ನು ಶ್ರೀ ರಂಗಪಟ್ಟಣ ಪುರಸಭೆಗೆ ವರ್ಗಾಯಿಸಲು ಮತ್ತು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಡಂಪರ್ ಪ್ಲೇಸರ್ –1 ಸಂಖ್ಯೆ ಮತ್ತು 4.5 ಘ.ಮೀ. ಸಂಗ್ರಾಹಕಗಳನ್ನು ಖರೀದಿಸಲು ಟೆಂಡರ್ ಕರೆಯುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ: 51:–** 3 ಸಂಖ್ಯೆ –3 ಘ.ಮಿ. ಕಂಟೈನರ್, 3 ಸಂಖ್ಯೆ – 4.5 ಘ.ಮೀ ಕಂಟೈನರ್ ಮತ್ತು 1 ಸಂಖ್ಯೆ ಟ್ರಾಕ್ಟರ್ ಪ್ಲೇಸರ್ ವಾಹನವನ್ನು ಶ್ರೀ ರಂಗಪಟ್ಟಣ ಪುರಸಭೆಗೆ, 1 ಸಂಖ್ಯೆ ಡಂಪರ್ ಪ್ಲೇಸರ್ ವಾಹನ , 7 ಸಂಖ್ಯೆ 4.5 ಘ.ಮೀ ಕಂಟೈನರ್ ಗಳನ್ನು ಜಿಲ್ಲಾವಾರು ಟೆಂಡರ್ (ಕೇಂದ್ರಿಕೃತ ಟೆಂಡರ್) ಮುಖಾಂತರ ಖರೀದಿಸಲು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:–52:–** 2008–09ನೇ ಸಾಲಿಗೆ ಸಹಾಯವಾಣಿ ನಿರ್ವಹಿಸಲು ಟೆಂಡರು ಪ್ರಕಟಣೆ ಹೊರಡಿಸಿದ್ದು , ಬರತಕ್ಕಟೆಂಡರುಗಳನ್ನು ತೆರೆದು ಅನುಮೋದಿಸುವ ವಿಚಾರ.

**ತೀರ್ಮಾನ: 52:–**ವಿಷಯದ ಬಗ್ಗೆ ಟೆಂಡರ್ ತೆರೆದು 3(ಮೂರು) ಜನ ಟೆಂಡರ್ ನಲ್ಲಿ ಭಾಗವಹಿಸಿರುತ್ತಾರೆ.

1) ಕುಶಾಲಾ ಎಂಟರ್ ಪ್ರೈಸಸ್ಟ್ , ಬೆಂಗಳೂರು
2) ಸುದರ್ಶನ್ ಕಂಪ್ಯೂಟರ್ ಗ್ರಾಫಿಕ್ಸ್ , ಬೆಂಗಳೂರು

3) ಗಂಗಾ ಎಂಟರ್ ಪ್ರೈಸಸ್ಸ್ ಬೆಂಗಳೂರು.

ತಾಂತ್ರಿಕ ಬಿಡ್ಡಿನಲ್ಲಿ ಯಶಸ್ವಿ ಬಿಡ್ಡುದಾರರಾದ ಕುಶಾಲಾ ಎಂಟರ್ ಪ್ರೈಸಸ್ಸ್ ಬೆಂಗಳೂರು ರವರ ದರ 12,900/- ಮಾಸಿಕ ಮತ್ತು ಸುದರ್ಶನ್ ಕಂಪ್ಯೂಟರ್ ಗ್ರಾಫಿಕ್ಸ್ ಬೆಂಗಳೂರು ರವರ ದರ 11,800/- ಮಾಸಿಕ ದರಗಳನ್ನು

ಸಲ್ಲಿಸಿರುತ್ತಾರೆ. ಕಡಿಮೆ ದರ ಸಲ್ಲಿಸಿರುವ ಸುದರ್ಶನ್ ಕಂಪ್ಯೂಟರ್ ಗ್ರಾಫಿಕ್ಸ್ ಬೆಂಗಳೂರು ರವರ ಟೆಂಡರ್ ನ್ನು ಅಂಗೀಕರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:53:**-ಮದ್ದೂರು ಪುರಸಭೆಯ ವ್ಯಾಪ್ತಿಯ ಸಾರ್ವಜನಿಕರ ಹಿತದೃಷ್ಠಿಯಿಂದ ಬೀದಿ ದೀಪ ಖರೀದಿಸುವ ಸಂಬಂಧ 250 ವ್ಯಾಟ್ಸ್ 25 ಸಂಖ್ಯೆ ಹಾಗೂ 36 ವ್ಯಾಟ್ಸ್ ಟ್ಯೂಬ್ ಲೈಟ್ 50 ಸಂಖ್ಯೆ ಖರೀದಿಸುವ ವಿಚಾರ.

**ತೀರ್ಮಾನ:53:**- ಮದ್ದೂರು ಪುರಸಭೆ ವ್ಯಾಪ್ತಿಯ ಸಾರ್ವಜನಿಕ ಹಿತದೃಷ್ಠಿಯಿಂದ ಬೀದಿ ದೀಪ ಖರೀದಿಸುವ ಸಂಬಂಧ 250 ವ್ಯಾಟ್ಸ್ ಎಸ್.ವಿ.ಲ್ಯಾಂಪ್ಸ್ 26 ಸಂಖ್ಯೆ ಮತ್ತು 40 ವ್ಯಾಟ್ಸ್ ಟೂಬ್ ಲೈಟ್ 75 ಸಂಖ್ಯೆಯನ್ನು 12ನೇ ಹಣಕಾಸು ಅನುದಾನದಲ್ಲಿ ಬಿಡುಗಡೆಯಗಿರುವ ಮುಕ್ತ ನಿಧಿಯಲ್ಲಿರುವ ಹಣದಲ್ಲಿ ಖರೀದಿಸುವುದು ಮತ್ತು ಹೆಚ್ಚುವರಿಯಿಂದ ಹಣವನ್ನು ಪುರಸಭಾ ನಿಧಿಯಿಂದ ಭರಿಸುವುದು ಎಂದು ಸಭೆಯ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:54:**-ಸರ್ಕಾರದಿಂದ ಬಿಡುಗಡೆಯಾಗಿರುವ 22.17 ಲಕ್ಷ ರೂ.ಗಳು ಕ್ರಿಯಾಯೋಜನೆಯನ್ನು ಅನುಮೋದಿಸುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:54:**-2006-07ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ ಪ್ರೋತ್ಸಾಹ ದನ ಬಿಡುಗಡೆಯಾಗಿರುವ 22,17ಲಕ್ಷರೂ.ಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಲಾಯಿತು.

| | |
|---|---|
| 1) ಕಛೇರಿಯ ಆವರಣದಲ್ಲಿ ಗೋಡಾನ್ ಗಳ ನಿರ್ಮಾಣ | 10.00ಲಕ್ಷ |
| 2) ಕಛೇರಿಗೆ ಮಾಡುಲರ್ ಪಾರ್ಟಿಸಿಯನ್ ಮಾಡಲು | 7.00ಲಕ್ಷ |
| 3) ಕಛೇರಿಗೆ ಮೀಟಿಂಗ್ ಹಾಲ್ ಪೀಠೋಪಕರಣಗಳು ಹಾಗೂ ಇತರೆ | 6.00ಲಕ್ಷ |
| | ------ |
| | 23.00ಲಕ್ಷ |
| | ------ |

ಹೆಚ್ಚುವರಿ ಹಣವನ್ನು ಪುರಸಭೆಯ ನಿಧಿಯಿಂದ ಭರಿಸಲು ಒಪ್ಪಲಾಯಿತು.

**ವಿಷಯ:-55:**- ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ ಬರುವ 4. ಹೈಮಾಸ್ಕ್‌ಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ವಹಿಸುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:55:**-ವಿಷಯವನ್ನು ಚರ್ಚಿಸಲಾಗಿ ಟೆಂಡರ್ ಕರೆದು ಖಾಸಗಿಯವರಿಗೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

***ವಿಷಯ:-56 ಮಾನ್ಯ ಅಧ್ಯಕ್ಷರ ಅನುಮತಿಯೊಡನೆ ಚರ್ಚೆಗೆ ಬರಬಹುದಾದ ಇತರೆ ವಿಷಯಗಳು***

**ವಿಷಯ:-56/1:**-ಶಾಲೆ, ಆಸ್ಪತ್ರೆ ದೇವಸ್ಥಾನ, ಸಂತೆ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ.

**ತೀರ್ಮಾನ:- 56/1** ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು

**ವಿಷಯ:–56/2** ಪಟ್ಟಣದ ಸ್ವಚ್ಚತೆ , ಬೀದಿ ದೀಪ , ನೀರು ಇವುಗಳ ಹೆಚ್ಚಿನ ಆದ್ಯತೆ ನೀಡುವ ಬಗ್ಗೆ
**ತೀರ್ಮಾನ:– 56/2** ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ವಿಷಯ:–56/3:–** ಹೊಸದಾಗಿ ಆಗಿರುವ ಬಡಾವಣೆಗಳಿಗೆ ನೀರು ರಸ್ತೆ ಬೀದಿ ದೀಪದ ವ್ಯವಸ್ಥೆ ಮಾಡುವ ಬಗ್ಗೆ .
**ತೀರ್ಮಾನ:– 56/3** ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು

**ವಿಷಯ:–56/4:–**ಸಾರ್ವಜನಿಕರಿಗೆ ಹೊಸದಾಗಿ ಹಾಗು ಹಳೆಯ ಉದ್ಯಾನವನಗಳನ್ನು ನಿರ್ಮಿಸುವ ಬಗ್ಗೆ .
**ತೀರ್ಮಾನ:– 56/4** ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ವಿಷಯ:–56/5 :–** ಪಟ್ಟಣದ ವ್ಯಾಪ್ತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ
**ತೀರ್ಮಾನ:– 56/5** ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ವಿಷಯ:–56/6 :–** ಹಾಲಿ ಪಟ್ಟಣದಲ್ಲಿ ಪಿ.ಡಬ್ಯ್ಯು.ಡಿ. ವತಿಯಿಂದ ನಡೆಯುತ್ತಿರುವ ಕಾಮಗಾರಿಗಳಲ್ಲಿ ತ್ವರಿತವಾಗಿ ಡಾಂಬರು ಹಾಕುವ ಬಗ್ಗೆ ಒತ್ತು ನೀಡುವ ಬಗ್ಗೆ.
**ತೀರ್ಮಾನ:–56/6 :–** ಹಾಲಿ ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಡೆಯುತ್ತಿರುವ ಕಾಮಗಾರಿಗಳಲ್ಲಿ ಈಗಾಗಲೇ ಮಟ್ಟಿಂಗ್ ಆಗಿರುವ ರಸ್ತೆಗಳಿಗೆ ಡಾಂಬರು ಹಾಕಲು ಲೋಕೋಪಯೋಗಿ ಇಲಾಖೆ ಅಭಿಯಂತರರನ್ನು ಕೋರಿ ಪತ್ರ ಬರೆಯಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:–56/7:–** ಇನ್ನು ಮುಂದೆ ಪುರಸಭೆಯ ಎಲ್ಲಾ ಕಾಮಗಾರಿಗಳನ್ನು ನಮ್ಮ ಪುರಸಭೆವತಿಯಿಂದಲೇ ಮಾಡುವ ಬಗ್ಗೆ ನಿರ್ಣಯ.
**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ:56/8–**ಹಳೇ ಪುರಸಭಾ ಕಛೇರಿ ಕಟ್ಟಡ ಕೆಟವಿಸಿ ಅದಕ್ಕೆ ಹೊಂದಿಕೊಂಡಂತೆ ಇರುವ ಹಳೇ ಬಸ್ ನಿಲ್ದಾಣ ಸೇರಿಸಿಕೊಂಡು ಆಧುನಿಕ ರೀತಿಯಲ್ಲಿ ಮಾರ್ಕೆಟ್ ಮಾಡುವ ಬಗ್ಗೆ.
**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ :56/9:–** ಕೆಮ್ಮಣ್ಣು ನಾಲೆಯ ಪುರಸಭಾ ಅಂಗಡಿಗಳನ್ನು ನವೀಕರಿಸಿ ಬಾಡಿಗೆಗೆ ಕೊಡುವ ಬಗ್ಗೆ
**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ: 56/10:–** ಕೆ.ಇ.ಬಿ. ಮುಂಭಾಗ ನಿರ್ಮಾಣವಾಗಿರುವ ಅಂಗಡಿ ಮಳಿಗೆಗಳು ನ್ಯಾಯಾಲಯದ ತೀರ್ಪಿನ್ನು ಪರಿಶೀಲಿಸಿ ಪರಿಶೀಲಿಸಿ ಅವುಗಳನ್ನು ಪುರಸಭೆಗೆ ಸೇರಿಸಿಕೊಳ್ಳುವ ಬಗ್ಗೆ.
**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ: 56/11:–** ಪಟ್ಟಣದ ಎಲ್ಲಾ ರಸ್ತೆಗಳಿಗೂ ಹೊಸದಾಗಿ ನಾಮಫಲಕ ಹಾಕುವ ಬಗ್ಗೆ.
**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ:56/12:–** ಸರ್ಕಾರಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ.ಮತ್ತು ಪಿ.ಯು.ಸಿ. ನಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪಟ್ಟಣದ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಧನಸಹಾಯ ನೀಡುವ ಬಗ್ಗೆ.

**ತೀರ್ಮಾನ:–** ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ:56/13:–**ಪಟ್ಟಣದ ವ್ಯಾಪ್ತಿಯಲ್ಲಿ ಹೆಚ್ಚು ಗ್ರೀನೆಲ್ಯಾಂಡ್ ಇರುವುದರಿಂದ ಅದನ್ನು ಪರಿಶೀಲಿಸಿ ಅಭಿವೃದ್ಧಿ ದೃಷ್ಠಿಯಿಂದ ವಾಸಯೋಗ್ಯಕ್ಕೆ ಪರಿವರ್ತಿಸಲು ಮನವಿ ಮಾಡುವ ಬಗ್ಗೆ.

**ತೀರ್ಮಾನ:–** ಚರ್ಚಿಸಲಾಯಿತು. ಪಟ್ಟಣದಲ್ಲಿ ಹಲವಾರು ಬಡಾವಣೆಗಳಲ್ಲಿ ವಾಸದ ಮನೆಗಳು ನಿರ್ಮಾಣವಾಗಿದ್ದು, ಇಂತಹ ಪ್ರದೇಶಗಳಲ್ಲಿ ಹಸಿರು ವಲಯ ಪ್ರದೇಶವಾಗಿ ನಗರ ಯೋಜನಾ ಇಲಾಖೆ ಗುರುತಿಸಿದ್ದು, ಇದರಿಂದ ಸಾರ್ವಜನಿಕರುಗಳಿಗೆ ಹಾಗು ,ಪಟ್ಟಣದ ಅಭಿವೃದ್ಧಿಗೆ ತೊಂದರೆಯಾಗಿದ್ದು, ಅಂತಹ ಪ್ರದೇಶಗಳನ್ನು ಹಸಿರು ವಲಯ ಪ್ರದೇಶದಿಂದ ಕೈಬಿಡಲು ಸರ್ಕಾರವನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ: 56/14 :–** ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಎಲ್ಲಾ ಪಟ್ಟಣಗಳಂತೆ ನಮ್ಮ ಪಟ್ಟಣ ವ್ಯಾಪ್ತಿಗೆ 75 ಅಡಿಗೆ ಪರವಾನಿಗೆ ನೀಡುವ ಬಗ್ಗೆ ನಿರ್ಣಯಿಸಿ ಮನವಿ ಸಲ್ಲಿಸುವ ಬಗ್ಗೆ.

**ತೀರ್ಮಾನ:–**ಚರ್ಚಿಸಲಾಯಿತು. ರಾಜ್ಯ ಹೆದ್ದಾರಿ ಪಟ್ಟಣಗಳಲ್ಲಿ ಹಾದು ಹೋಗುವ ಪ್ರದೇಶಗಳಲ್ಲಿ ರಸ್ತೆ ಮಧ್ಯ ಭಾಗದಿಂದ 75 ಅಡಿ ಬಿಟ್ಟು ಕಟ್ಟಡ ಕಟ್ಟಲು ಅನುಮತಿ ನೀಡುತ್ತಿದ್ದು ಮದ್ದೂರು ಪಟ್ಟಣದಲ್ಲಿ ರಸ್ತೆ ಮಧ್ಯ ಭಾಗದಿಂದ 40 ಮೀ ಅಂದರೆ 130 ಅಡಿ ಬಿಟ್ಟು ಕಟ್ಟಡ ಪರವಾಗಿ ನೀಡಲಾಗುತ್ತಿರುತ್ತೆ ಇಂದಾರಿಂದಾಗಿ ಸಾರ್ವಜನಿಕರುಗಳಿಗೆ ತೊಂದರೆಯಾಗುತ್ತಿದ್ದು, ಬೇರೆ ಕಡೆ ನೀಡುತ್ತಿರುವಂತೆ ಮದ್ದೂರು ಪಟ್ಟಣದಲ್ಲೂ ಸಹ ರಾಜ್ಯ ಹೆದ್ದಾರಿಯಲ್ಲಿ 75 ಅಡಿ ಬಿಟ್ಟು ಕಟ್ಟಡ ಕಟ್ಟಲು ಪರವಾನಿಗೆ ನೀಡಲು ಆದೇಶ ಹೊರಡಿಸಲು ಸರ್ಕಾರವನ್ನು ಕೋರಲು ಒಪ್ಪಿ ಸರ್ವಾನುಮತರಿಂದ ತೀರ್ಮಾನಿಸಲಾಯಿತು.

**ವಿಷಯ: 56/15:–**ಚಾಮನಹಳ್ಳಿಯಲ್ಲಿನ ಆಶ್ರಯ ಮನೆಗಳನ್ನು (ಪುರಸಭೆಗೆ ಸೇರಿದ) ಪೂರ್ಣ ಮಾಡಿ ಫಲಾನುಭವಿಗಳಿಗೆ ತುರ್ತಾಗಿ ವಿತರಿಸಲು ಕೋರುವ ಬಗ್ಗೆ.

**ತೀರ್ಮಾನ:–** ಚರ್ಚಿಸಲಾಯಿತು. ಚಾಮನಹಳ್ಳಿ ಸರ್ವೆನಂಬರ್‌ದಲ್ಲಿ ನಿರ್ಮಾಣವಾಗುತ್ತಿರುವ ಆಶ್ರಯ ಮನೆಗಳನ್ನು ಜರೂರು ಪೂರ್ಣಗೊಳಿಸಿ ಫಲಾನುಭವಿಗಳಿಗೆ ವಿತರಿಸಲು ಹಸ್ತಾಂತರಿಸಬೇಕೆಂದು ನಿರ್ಮಿತಿ ಕೇಂದ್ರವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ: 56/16:–** ಪುರಸಭೆ ಉದ್ಯಾನವನಗಳಿಗೆ ಸ್ಪ್ರಿಂಕಲರ್ ಮತ್ತು ಸ್ಪ್ರಿಂಕೆಲರ್ ಪೈಪ್ ಗಳನ್ನು ಖರೀದಿಸಲು ಕೊಟೇಶನ್ ಸಂ:ಪುಸಮ/ಪಅ/27/2007–08 ದಿನಾಂಕ:01–02–2008ರಲ್ಲಿ ಕರೆದಿದ್ದು, ಬಂದಿರುವ ಕೊಟೇಶನ್‌ನ್ನು ಅಂಗೀಕರಿಸುವ ವಿಚಾರ.

**ತೀರ್ಮಾನ:–** ಬಂದಂತಹ 3 ಕೊಟೇಶನ್‌ಗಳನ್ನು ಅಂದರೆ ಶ್ರೀ ವೆಂಕಟೇಶ್ವರ ಮೋಟಾರ್ ರಿವೈಂಡಿಂಗ್ ವರ್ಕ್ಸ್ , ಶಿವಪುರ, ಶಂಕರ್ ಎಲೆಕ್ಟ್ರಿಕಲ್ಸ್, ಮದ್ದೂರು ರವರ ಕೊಟೇಶನ್ ಪರಿಶೀಲಿಸಲಾಗಿ , ಕಡಿಮೆ ದರ ನಮೂದಿಸಿರುವ ಮೆ: ಶಂಕರ್ ಎಲೆಕ್ಟ್ರಿಕಲ್ಸ್ ಅಂಡ್ ಮೋಟಾರ್ ರಿವೈಂಡಿಂಗ್ ವರ್ಕ್ಸ್ , ಮದ್ದೂರು ರವರ ಕೊಟೇಶನ್ ಅಂಗೀಕರಿಸಲು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ :56/17:–** ಪೋಲಿಸ್ ವಸತಿ ಗೃಹ ಬಳಿಯಿರುವ ಕನ್ಸರ್‌ವೆನ್ಸಿಯಲ್ಲಿ ಬೆಳೆದಿರುವ ಗಿಡಗಳನ್ನು ಮತ್ತು

ಚರಂಡಿಯಲ್ಲಿನ ಹೂಳಿನ್ನು ತೆಗೆಯಿಸುವ ಬಗ್ಗೆ.

**ತೀರ್ಮಾನ:–** ಕನ್ಸರ್‌ವೆನ್ಸಿಯಲ್ಲಿ ಬೆಳೆದಿರುವ ಗಿಡಗಳನ್ನು ಮತ್ತು ಚರಂಡಿಯಲ್ಲಿನ ಹೂಳನ್ನು ಜೆಸಿಬಿಯಿಂದ ತೆಗೆಯಿಸಲು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:–56/18** :– ಸರ್ಕಾರದ ಅಧೀನ ಕಾರ್ಯದರ್ಶಿ , ನಗರಾಭಿವೃದ್ಧಿ , ಇಲಾಖೆ ರವರ ಪತ್ರ ಸಂ: ನಅಇ 6 ಎಸಿಬಿ 2007 ದಿನಾಂಕ:19–05–2007 ಮತ್ತು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂ:ಪೌನಿ/ನಿನ/ಘವನಿ/134/2004–05 ದಿನಾಂಕ: 14–02–2008ರಂತೆ ಪುರಸಭೆ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪಿಸಲು ಸೂಕ್ತ ಜಮೀನು ಗುರುತಿಸುವ ಬಗ್ಗೆ.

**ತೀರ್ಮಾನ:–** ಪುರಸಭೆಯ ಹಳೆಯ ನೀರು ಶುದ್ದೀಕರಣ ಘಟಕ, ಶಿವಪುರ , ನಿರುಪಯುಕ್ತವಾಗಿದ್ದು, ಸದರಿ ಜಾಗವನ್ನು ಕಂದಾಯ ಇಲಾಖೆಯಿಂದ ಅಳತೆ ಮಾಡಿಸಿ ಹದ್ದು ಬಸ್ತು ನಿಗಧಿಪಡಿಸಿಕೊಂಡ ನಂತರ ಕಸಾಯಿಖಾನೆ ನಿರ್ಮಾಣ ಮಾಡಲು ನಿಯಮಾನುಸಾರ ಕ್ರಮವಹಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:–56/19** :– 2007–08 ನೇ ಸಾಲಿಗೆ ಜೆರಾಕ್ಸ್ ಮತ್ತು ಲೇಖನಿ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್ ಕರೆದಿದ್ದು, ದಿನಾಂಕ:31–03–2008 ಕ್ಕೆ ಅವಧಿ ಮುಗಿದಿರುವುದರಿಂದ , ಪುನ: 2008–09 ನೇ ಸಾಲಿಗೆ ಟೆಂಡರ್ ಕರೆಯುವ ತನಕ ಸಾಮಗ್ರಿಗಳನ್ನು ಮತ್ತು ಜೆರಾಕ್ಸ್ ನ್ನು ಮಾಡಿಸಲು ಹಾಗು ಖರೀದಿಸಲು ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**: ಚರ್ಚಿಸಲಾಯಿತು. 2008–09 ನೇ ಸಾಲಿಗೆ ಜೆರಾಕ್ಸ್ ಲೇಖನಿ ಸಾಮಗ್ರಿಗಳನ್ನು ಖರೀದಿಸುವುದು ಮತ್ತು ಜೆರಾಕ್ಸ್ ಮಾಡಿಸುವ ಬಗ್ಗೆ 08–09 ನೇ ಸಾಲಿಗೆ ಟೆಂಡರ್ ಪ್ರಕ್ರಿಯೇ ಆಗುವ ತನಕ ಖರೀದಿಯನ್ನು ಮುಂದುವರೆಸಿಕೊಂಡು ಹೋಗಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:56/20:–** ದಿನಾಂಕ:01–03–2008 ರಂತೆ ಭೂಮಿಯನ್ನು ಅಂದಾಜು ಮಾರುಕಟ್ಟೆ ಬೆಲೆಯನ್ನು ಮತ್ತು ಕಟ್ಟಡದ ಬೆಲೆಯನ್ನು ಉಪ ನೊಂದಾಣಾಧಿಕಾರಿಗಳು ಮದ್ದೂರು ರವರ ಪ್ರಕಾರ ಪ್ರಕಟಿಸಿದ್ದು ಆಸ್ತಿ ಗಳಿಗೆ ಸಂಬಂಧಪಟ್ಟಂತೆ ತೆರಿಗೆಗೆ ಗುರಿಯಾಗ ತಕ್ಕ ಹೊಸದಾಗಿ ಸ್ವತ್ತಿನ ಮೌಲ್ಯಗಳ ದರವನ್ನು ನಿಗಧಿಗೊಳಿಸುವ ಬಗ್ಗೆ.

**ತೀರ್ಮಾನಿ:–** ದಿನಾಂಕ:07–04–2008 ರಿಂದ ನಿಗಧಿ ಗೊಳಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:56/21:–** ಶ್ರೀ ಪಿ.ಆನಂದ ಬಿನ್ ಲೇ: ಪುಟ್ಟಸ್ವಾಮಿಗೌಡ ಸರ್ಕಾರಿ ಆಸ್ಪತ್ರೆ ಹಿಂಭಾಗ ಮದ್ದೂರು ರವರ ಮನವಿ ಸಲಿಸ್ಲಿ ,ತಮ್ಮ ಮನೆಯ ಪಕ್ಕದಲ್ಲಿರುವ ಎಂ.ಜಿ. ರಾಮು ರವರ ತೆಂಗಿನ ಮರದಿಂದ ಕಾಯಿ ಗರಿ ಬೀಳುತ್ತಿದ್ದು ಹೆಂಚು ಹಾಳಾಗುತ್ತಿರುವುದರಿಂದ ಮರ ತೆರೆವುಗೊಳಿಸಿ ಕೊಡಲು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:–** ಚರ್ಚಿಸಲಾಯಿತು. ಸದರಿ ಮರದಿಂದ ಆಗುವ ಅನಾಹುತಗಳಿಗೆ ಶ್ರೀ ಎಂ.ಜಿ.ರಾಮುರವರು ಸಂಪೂರ್ಣಗ ವಾಗಿ ಜವಬ್ದಾರಿಯಾಗಿರಬೇಕು ಅಥವಾ ತೆಂಗಿನ ಮರವನ್ನು ತೆರವು ಗೊಳಿಸಬೇಕೆಂದು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ 56/22 :–** 2007–08ನೇ ಸಾಲಿನ ಶೇ.18 ರ ಮೀಸಲಾತಿ ಹಣದಲ್ಲಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಪ್ರಕಟಣೆ ಸಂಖ್ಯೆ ಮುಕಾಮ/ಜೆಇ/ಟೆಂಡರ್ 1/07–08 ದಿನಾಂಕ:13–02–2008 ರಲ್ಲಿ ಟೆಂಡರ್ ಕರೆದಿದ್ದೂ ಬಂದಿರುವ ಟೆಂಡರ್ ಅಂಗಿಕರಿಸುವ ವಿಚಾರ.

**ತೀರ್ಮಾನಿ:–** ಟೆಂಡರ್‌ಗಳನ್ನು ಪರಿಶೀಲಿಸಲಾಯಿತು. ಸರ್ಕಾರಿ ಆದೇಶ ಸಂಖ್ಯೆ : ನಅಇ:ಟಿ.ಎಂಎಸ್ 59 ಬೆಂಗಳೂರು 2004 ದಿನಾಂಕ:16/07/2004 ರಂತೆ ಕ್ರಮ ಕೈಗೊಂಡಿದ್ದೂ, 3 ಜನ ಗುತ್ತಿಗೆ ದಾರರು ಟೆಂಡರ್‌ನ ಸಲ್ಲಿಸಿದ್ದೂ ಎಂ.ಎ. ಸುರೇಶ್ ಬಾಬು ಗುತ್ತಿಗೆದಾರರು ಟೆಂಡರ್ ನ ಮೊತ್ತಕ್ಕೆ 7.95% ದರವನ್ನು ಎಂ,ಆರ್. ದಿನೇಶ್‌ಬಾಬು ರವರು ಶೇ.10% ಹೆಚ್ಚು ದರವನ್ನು ವಿಜಯಕುಮಾರ್ ರವರು ಶೇ,8.65% ಹೆಚ್ಚು ದರವನ್ನು ನಮೂದಿಸಿದ್ದೂ ಕಡಿಮೆ ದರ ನಮೂದಿಸಿರುವ ಎಂ.ಎ.ಸುರೇಶ್‌ಬಾಬು ರವರ ದರವನ್ನು ಅಂಗಿಕರಿಸಿ ಸರ್ವಾನುಮತ ತೀರ್ಮಾನಿಸಲಾಯಿತು.

**ವಿಷಯ:56/23:–** 2008–09ನೇ ಸಾಲಿಗೆ ವಾರ್ಷಿಕ ಟೆಂಡರ್ ಕರೆಯುವ ಬಗ್ಗೆ ಚರ್ಚಿಸುವ ಬಗ್ಗೆ

**ತೀರ್ಮಾನ:–**2008–09ನೇ ಸಾಲಿಗೆ ನೀರು ಸರಬರಾಜು ಸಮಾಗ್ರಿಗಳು, ರಾಸಾಯನಿಕಗಳು ನೈರ್ಮಲ್ಯ ಸಾಮಾಗ್ರಿಗಳು ಕಛೇರಿಯ ಸಾಮಾಗ್ರಿಗಳ ವಾರ್ಷಿಕ ಟೆಂಡರ್ ಕರೆಯಲು ತೀರ್ಮಾನಿಸಿತು. ಸಾರ್ವಜನಿಕ ಹಿತಾದೃಷ್ಠಿಯಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾದರೆ ಹಳೇ ಸಾಲಿನ 2007–08ನೇ ಸಾಲಿನ ದರವನ್ನು ಮುಂದುವರೆಸಲು ತೀರ್ಮಾನಿಸಿತು

**ವಿಷಯ: 56/24:–** ಮದ್ದೂರು ಪಟ್ಟಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಪೈಪ್ ಲೈನ್ ಅಳವಡಿಸುವ ಬಗ್ಗೆ.

**ತೀರ್ಮಾನ:** ಟೌನಿನಲ್ಲಿ ಅವಶ್ಯಕತೆ ಇರುವ ಕಡೆ ಪೈಪ್ ಪೈನ್ ಅಳವಡಿಸಲು ತೀರ್ಮಾನಿಸಲಾಯಿತು. ಹಾಗೂ ಈ ಕೆಳಕಂಡ ಸ್ಥಳಗಳಲ್ಲಿ ಪೈಪ್ ಲೈನ್ ಅಳವಡಿಸಲು ಅಂದಾಜು ತಯಾರಿಸಿ , ಸರ್ಕಾರಿ ಆದೇಶ ಸಂಖ್ಯೆ: ರಂತೆ, ಕ್ರಮವಹಿಸುವುದು ಎಂದು ಹಾಗೂ ಅಂದಾಜು ಮಿತಿಯು ಹೆಚ್ಚಾದರೆ ಟೆಂಡರ್ ಕರೆದು ಕ್ರಮವಹಿಸುವುದು ಎಂದು ತೀರ್ಮಾನಿಸಿತು.

1) ಚನ್ನೇಗೌಡ ಬಡಾವಣೆಯ ಅಂದಾನಿ ಮನೆ ಬೀದಿಗೆ 3'' ಪೈಪ್ ಲೈನ್
2) ಚನ್ನೇಗೌಡ ಬಡಾವಣೆಯ ಮಾಜಿ ಅಧ್ಯಕ್ಷೆ ಮದ್ದೂರಮ್ಮನ ಬೀದಿಗೆ ಪೈಪ್ ಲೈನ್
3) ಚನ್ನೇಗೌಡ ಬಡಾವಣೆಯ ಶನಿಮಹಾತ್ಮ ದೇವಸ್ಥಾನದ ಬೀದಿಗೆ
4) ವಾರ್ಡ್ 20 ರಲ್ಲಿ ಟೀಚರ್ಸ್ ಕಾಲೋನಿ ಜಿ.ಟಿ ಶ್ರೀನಿವಾಸ್ ಮನೆ ಬೀದಿಗೆ ಪೈಪ್ ಲೈನ್
5) ಸಾರ್ವಜನಿಕ ಆಸ್ಪತ್ರೆ ಟ್ಯಾಂಕಿನಿಂದ ಕೊಲ್ಲಿಯವರೆಗೆ ಬೆಂಗಳೂರು ಮೈಸೂರು ರಸ್ತೆಯಲ್ಲಿ 6'' ಪೈಪು
6) ದೊಡ್ಡಿ ಬೀದಿಯಿಂದ ಮದ್ದೂರಮ್ಮ ದೇವಸ್ಥಾನದವರೆಗೆ 3'' ಪೈಪ್ ಲೈನ್
7) ಟ್ಯಾಂಕ್ ರಸ್ತೆ 9ನೇ ಕ್ರಾಸ್ ನಲ್ಲಿ ಪ್ರಭು ಮನೆ ಮುಂದೆ 3'' ಪೈಪ್ ಲೈನ್.

**ವಿಷಯ56/25–** ಸಾರ್ವಜನಿಕ ಆಸ್ಪತ್ರೆ ಮದ್ದೂರಿನ ಆವರಣದಲ್ಲಿ ನೀರಿನ ಸಂಗ್ರಹಣೆಯ ತೊಟ್ಟಿ ನಿರ್ಮಾಣ ಮಾಡುವ ಬಗ್ಗೆ.

**ತೀರ್ಮಾನ :–** ಒಪ್ಪಲಾಯಿತು.

**ವಿಷಯ: 56/26 :–**ಟೌನಿನ ವಿವಿಧ ಶಾಲೆಯವರು ಶಾಲೆಯ ಆವರಣದಲ್ಲಿ ನೀರಿನ ವ್ಯವಸ್ಥೆ ಕೊಡಿಸಿ ಕೊಡಲು ಕೋರಿರುವ ವಿಚಾರ.

**ತೀರ್ಮಾನಿ :–** ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲಾ ಕಾಲೇಜುಗಳಿಗೆ ಉಚಿತವಾಗಿ ನೀರಿನ ವ್ಯವಸ್ಥೆ ವ್ಯವಸ್ಥೆ ಮಾಡಲು ಒಪ್ಪಲಾಯಿತು.

**ವಿಷಯ:56/27:–** ನೀರು ಸರಬರಾಜು ನಿರ್ವಹಣೆಗೆ ಮೊಬೈಲುಗಳನ್ನು ಖರೀದಿಸುವ ಬಗ್ಗೆ.

**ತೀರ್ಮಾನ:–** 8 ಸಂಖ್ಯೆ ಮೊಬೈಲ್‌ಗಳನ್ನು ಖರೀದಿಸಲು ಒಪ್ಪಲಾಯಿತು.

**ವಿಷಯ: 56/28:–** ಟೌನಿನ ಮಿನಿ ನೀರು ಸರಬರಾಜು ಯೋಜನೆಯ ತೊಂಬೆಗಳಿಗೆ ನೀರು ಒದಗಿಸುವ ಬಗ್ಗೆ.

**ತೀರ್ಮಾನ:–**ಹೊಸದಾಗಿ ಪೈಪ್ ನ್ನು ಅಳವಡಿಸಲು ಅಂದಾಜು ತಯಾರಿಸಿ ನೀರಿನ ತೊಂಬೆಗಳಿಗೆ ನೇರವಾಗಿ ನೀರು ಸರಬರಾಜು ಮಾಡಲು ಒಪ್ಪಲಾಯಿತು.

**ವಿಷಯ:56/29:–**ಶ್ರೀಮತಿ ಮದ್ದೂರಮ್ಮ ದೇವಸ್ಥಾನದ ಆವರಣದಲ್ಲಿ ಬೋರೆವೆಲ್ ಕೊರೆದು ಹ್ಯಾಂಡ್ ಪಂಪ್ ಅಳವಡಿಸುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:** ಒಪ್ಪಲಾಯಿತು.

**ವಿಷಯ:–56/30:–** ಮದ್ದೂರು ಪುರಸಭೆ ವ್ಯಾಪ್ತಿಯ ಶಿವಪುರ ಕುಂಬಾರ ಬೀದಿಯಲ್ಲಿ ಜಯಮ್ಮ ಮನೆಯಿಂದ ಸಿ.ಶಂಕರ ಮನೆಯವರೆಗೆ ರಸ್ತೆ ಮಣ್ಣು ಹರಡುವ ವಿಚಾರ.

**ತೀರ್ಮಾನ:–** ವಿಷಯವನ್ನು ಚರ್ಚಿಸಲಾಗಿ , ಸಾರ್ವಜನಿಕರಿಗೆ ತಿರುಗಾಡಲು ತೊಂದರೆಯಾಗಿರುವುದರಿಂಧ ತುರ್ತಾಗಿ

ಕಾಮಗಾರಿಯನ್ನು ಕೈಗೊಳ್ಳಲು ಸಭೆಯ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:–56/31:–** ಮದ್ದೂರು ಪುರಸಭೆಗೆ 12ನೇ ಹಣಕಾಸು ಅನುದಾನದಲ್ಲಿ 2007–08ರಲ್ಲಿ 5–63 ಲಕ್ಷ ಬಿಡುಗಡೆ ಯಾಗಿದ್ದು ಕ್ರಿಯಾ ಯೋಜನೆ ರೂಪಿಸುವ ವಿಚಾರ .

**ತೀರ್ಮಾನ:–** ಚರ್ಚಿಸಲಾಯಿತು. ಡಾಟಾ ಬೇಸೆಗಾಗಿ ಬಿಡುಗಡೆಯಾಗಿರುವ ಅನುದಾನದಲ್ಲಿ ಕಂಪ್ಯೂಟರ್ಸ್ ಮತ್ತು ಆಕ್ಸ್ ಸೆರಿಸ್‌ನ್ನು ಖರೀದಿಸಲು ಒಪ್ಪಿಗೆ ನೀಡಲಾಯಿತು.

**ವಿಷಯ:56/32:–** ಕಛೇರಿಯಲ್ಲಿ ಸಭಾಂಗಣ ಹಾಗೂ ಕಛೇರಿಗೆ ಪೀಠೋಪಕರಣಗಳನ್ನು ಮಾಡಿಸಬೇಕಾಗಿರುವುದರಿಂದ ಕನ್ಸಲೆಂಟೆಂಡ್ ಅವಶ್ಯಕತೆಯಿದ್ದು ನಕ್ಷೆ ಮತ್ತು ಅಂದಾಜನ್ನು ತಯಾರಿಸುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:–** ವಿಷಯವನ್ನು ಚರ್ಚಿಸಲಾಯಿತು. ಆಧುನಿಕ ಪೀಠೋಪಕರಣಗಳು ಬೇಕಾಗಿರುವುದರಿಂದ ಎಸ್.ಆರ್. ನಲ್ಲಿ ಐಟಂ ಗಳು ಇಲ್ಲದಿರುವುದರಿಂದ ಕನ್ಸಲ್‌ಟೆಂಟ್ ರವರ ಸೇವೆಯನ್ನು ಪಡೆಯಲು ಒಪ್ಪಿಗೆ ನೀಡಲಾಯಿತು.

**ವಿಷಯ:–56/33** :–2007–08ನೇ ಸಾಲಿಗೆ ಶೇ.18 ರ ಯೋಜನೆಯಡಿ ಖರ್ಚು ಮಾಡಲು ಉದ್ದೇಶಿಸಿರುವ ರೂ.9.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳರವರ ಅಧಿಕೃತ ಜ್ಞಾಪನ ಸಂಖ್ಯೆ ಮು.ಸಿ.ಸಿ(02)/281/2007–08 ದಿನಾಂಕ:01–09–2007 ರಂತೆ ಮಂಜೂರಾತಿ ದೊರಕಿದ್ದು ಈ ಬಗ್ಗೆ ಫಲಾನುಭವಿಗಳಿಗೆ ಸೌಲಭ್ಯ ನೀಡಿರುವುದನ್ನು ಅನುಮೋದಿಸುವ ವಿಚಾರ.

**ತೀರ್ಮಾನ:–**ಚರ್ಚಿಸಲಾಯಿತು. ವಿವಿಧ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರವನ್ನು ಸಭೆಗೆ ಓದಿ ತಿಳಿಸಲಾಯಿತು. ಸದರಿ ಫಲಾನುಭವಿಗಳ ಆಯ್ಕ ಪಟ್ಟಿಗೆ ಸಭೆಯು ಅನುಮೋದನೆ ನೀಡಲಾಯಿತು. ಫಲಾನುಭವಿಗಳ ವಿವರ ಈ ರೀತಿ ಇದೆ.

**ಟಿ.ವಿ.ಗಳನ್ನು ಪಡೆದಿರುವ ಫಲಾನುಭವಿಗಳು ಪಟ್ಟಿಯ ವಿವರ**

| ಕ್ರ.ಸಂ | ಹೆಸರು ಮತ್ತು ವಿಳಾಸ |
|---|---|
| 01 | ಡಾ: ಬಿ.ಆರ್.ಅಂಬೇಡ್ಕರ್ ಭವನ ಸಿದ್ದಾರ್ಥನಗರ,ಮದ್ದೂರು |
| 02 | ಮಂಡ್ಯ ಜಿಲ್ಲಾ ಗುತ್ತಿಗೆ ಪೌರ ಕಾರ್ಮಿಕರ ಸಂಘ, ಸಿದ್ದಾರ್ಥನಗರ , ಮದ್ದೂರು |
| 03 | ಶ್ರೀ ಬಾಬು ಜಗಜೀವರಾಂ ಯುವಜನ ಬಳಗ (ರಿ) ಕೆ.ಇ.ಬಿ.ಹಿಂಭಾಗ,5ನೇ ಮತ್ತು 6ನೇ ಕ್ರಾಸ್,ಮದ್ದೂರು |

***ತಮಟೆ ಮತ್ತು ಇತರೆ ಪರಿಕರಗಳನ್ನು ಪಡೆದಿರುವ ಫಲಾನುಭವಿಗಳು ಪಟ್ಟಿಯ ವಿವರ.***

| ಕ್ರ.ಸಂ | ಹೆಸರು ಮತ್ತು ವಿಳಾಸ |
|---|---|
| 01 | ಮದ್ದೂರು ಟೌನ್ 10ನೇ ವಾರ್ಡ ಚನ್ನೇಗೌಡ ಬಡಾವಣೆ 1) ಅಂದಾನಿ 2) ಶಿವಣ್ಣ 3) ರಾಜು ಮತ್ತು ಇತರೆ |
| 02 | ಗುತ್ತಿಗೆ ಪೌರಾಕಾರ್ಮಿಕರ ಸಂಘ ಮದ್ದೂರು ತಾಲ್ಲೂಕು ಘಟಕ ಸಿದ್ದಾರ್ಥನಗರ ಮದ್ದೂರು |
| 03 | ಸಿದ್ದಾರ್ಥನಗರ 4ನೇ ಕ್ರಾಸ್ ಯುವಕರಾದ ಮಹೇಶ್ ಎಸ್. ಸತೀಶ್ .ಸಿ. ಮಂಜು ಎಂ.ಸಿ.ಶಿವಕುಮಾರ್ |
| 04 | ಶಿವಶಕ್ತಿ ಸ್ವಸಹಾಯ ಸಂಘ ಹೆಚ್.ಕೆ.ವಿ.ನಗರ, ಮದ್ದೂರು ಟೌನ್ |
| 05 | ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸಂಘ(ರಿ) ಮದ್ದೂರು,(ತಾ) ಸಿದ್ದಾರ್ಥನಗರ 5ನೇ ಕ್ರಾಸ್ ಮದ್ದೂರು ಟೌನ್ |
| 06 | ಸಿದ್ದಾರ್ಥನಗರ 6ನೇ ಕ್ರಾಸ್ ನಿವಾಸಿಗಳಾದ ಶ್ರೀನಿವಾಸ್ , ಹೆಚ್.ಬಿ. ಕುಮಲ ರಾಜು ಎಂ.ಸಿ, ಪುರಸಭಾ ಸದಸ್ಯರಾದ ಮಹದೇವಮ್ಮ ಮತ್ತು ಇತರರು |
| 07 | ಜೈ ಬೀಮ್ ಯುವಕ ಸಂಘ (ರಿ) ಹೈಸ್ಕೂಲ್ ಹಿಂಭಾಗ 2ನೇ ಕ್ರಾಸ್ ಮದ್ದೂರು |

***ಗಾರೆ ಕೆಲಸ ಸಾಮಾಗ್ರಿಗಳನ್ನು ಪಡೆದಿರುವ ಫಲಾನುಭವಿಗಳು ಪಟ್ಟಿಯ ವಿವರ.***

| ಕ್ರ.ಸಂ | ಹೆಸರು ಮತ್ತು ವಿಳಾಸ |
|---|---|
| 01 | ವಿಜಯ ಬಿನ್ ಲೇ: ರಾಮಸ್ವಾಮಿ ಗರೀಬಿ ಸೈಟ್ ಮದೂರು |
| 02 | ಜಗದೀಶ್ ಬಿನ್ ವೆಂಕಟೇಶ್ 7ನೇ ಕ್ರಾಸ್ ಸಿದ್ದಾರ್ಥನಗರ, ಮದ್ದೂರು |
| 03 | ಎಂ.ರಾಜು ಬಿನ್ ಲೇ: ಮಣಿ ಸಿದ್ದಾರ್ಥನಗರ 3ನೇ ಕ್ರಾಸ್ , ಮದ್ದೂರು |
| 04 | ಬೋರಯ್ಯ ಬಿನ್ ಕುನ್ನಯ್ಯ 5ನೇ ಕ್ರಾಸ್ ಸಿದ್ದಾರ್ಥನಗರ, ಮದ್ಧೂರು |
| 05 | ಗಿರಿಯ ಬಿನ್ ದಾಸಯ್ಯ ಸಿದ್ದಾರ್ಥನಗರ 5ನೇ ಕ್ರಾಸ್ ಮದ್ದೂರು |
| 06 | ಹನುಮಂತ ಬಿನ್ ಲೇ : ಷಣ್ಮಗಯ್ಯ , ಚನ್ನೇಗೌಡ ಬಡಾವಣೆ ,ಮದ್ದೂರು ವಾರ್ಡ್ –10 |
| 07 | ರಾಜು ಬಿನ್ ಲೇ : ಮರಿಯಪ್ಪ ಚನ್ನೇಗೌಡ ಬಡಾವಣೆ, ಮದ್ದೂರು ವಾರ್ಡ್–10 |
| 08 | ರವಿ ಎಂ.ಬಿ. ಬಿನ್ ಬೈರಯ್ಯ ಚನ್ನೇಗೌಡ ಬಡಾವಣೆ ಗರೀಬಿ ಸೈಟ್, ಮದ್ದೂರು |
| 09 | ಶಂಕರ ಬಿನ್ ಲೇ: ಕೃಷ್ಣಪ್ಪ ಚನ್ನೇಗೌಡ ಬಡಾವಣೆ ಗರೀಬಿ ಸೈಟ್ .ಮದ್ದೂರು |
| 10 | ಗೋವಿಂದರಾಜು ಬಿನ್ ಲೇ: ಕುಪ್ಪಯ್ಯ ಚನ್ನಗೌಡ ಬಡಾವಣೆ ಗರೀಬಿ ಸೈಟ್ ಮದ್ದೂರು |
| 11 | ಕುಮಾರ ಬಿನ್ ಬಸವಯ್ಯ ಸಿದ್ದಾರ್ಥನಗರ 5ನೇ ಕ್ರಾಸ್ ಮದ್ದೂರು |

| | |
|---|---|
| 12 | ವೆಂಕಟೇಶ್ ಬಿನ್ ಎಲ್ಲಯ್ಯ 2ನೇ ಕ್ರಾಸ್ ಸಿದ್ದಾರ್ಥನಗರ,ಮದ್ದೂರು |
| 13 | ಮಲ್ಲೇಶ್ ಬಿನ್ ಲೇ : ಕಾಳಯ್ಯ ರಾಮ್ ರಹೀಂ ನಗರ 6ನೇ ಕ್ರಾಸ್ , ಮದ್ದೂರು ಟೌನ್. |
| 14 | ಹೊನ್ನಯ್ಯ ಬಿನ್ ಲೇ: ಸುಬ್ಬಯ್ಯ ಚನ್ನೇಗೌಡ ಬಡಾವಣೆ, ಗರೀಬಿ ಮದ್ದೂರು |

**ಅನಾರೋಗ್ಯ ಪೀಡಿತರು ಧನಸಹಾಯ ಪಡೆದಿರುವ ಫಲಾನುಭವಿಗಳು ಪಟ್ಟಿಯ ವಿವರ.**

| ಕ್ರ.ಸಂ | ಹೆಸರು ಮತ್ತು ವಿಳಾಸ |
|---|---|
| 01 | ಎಂ.ಚಂದ್ರ ಬಿನ್ ಲೇ: ಎಂ.ಆರ್. ಮಾದಯ್ಯ<br>2ನೇ ಕ್ರಾಸ್ ಸಿದ್ದಾರ್ಥನಗರ ,ಮದ್ದೂರು |
| 02 | ಎಂ.ಜಿ. ಶಿವಕುಮಾರ ಬಿನ್ ಜಯರಾಮಯ್ಯ<br>ಸಿದ್ದಾರ್ಥನಗರ 5ನೇ ಕ್ರಾಸ್ , ಮದ್ದೂರು |

**ಶೈಕ್ಷಣಕ ಕಾರ್ಯಕ್ರಮಗಳಿಗೆ, ಮೀಸರಿಟ್ಟರುವ ಹಣದಲ್ಲಿ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯ ಪಡೆದಿರುವ ಫಲಾನುಭವಿಗಳು ಪಟ್ಟಿಯ ವಿವರ.**

| ಕ್ರ.ಸಂ | ಹೆಸರು ಮತ್ತು ವಿಳಾಸ |
|---|---|
| 01 | ಎಂ.ಬಿ.ಪ್ರಶಾಂತ ಬಿನ್ ಬಸವರಾಜು ಎಂ.ಕೆ. ಹಳೆ ವೈದ್ಯನಾಥಪುರ ರಸ್ತೆ, ಮದ್ದೂರು |
| 02 | ಕು: ಚೈತ್ರಶ್ರೀ ಎಂ.ಎಸ್ . ಬಿನ್ ಕೆ.ಮಹಾದೇವು ಹಳೆ ವೈದ್ಯನಾಥಪುರ ರಸ್ತೆ, ಮದ್ದೂರು |
| 03 | ಎ.ಎಸ್. ಸಂಜೀವಮೂರ್ತಿ ಬಿನ್ ಸಂಜೀವಯ್ಯ ಮೊಬ್ಬಳಗೆರೆ , ಮದ್ದೂರು |
| 04 | ಭರತ್ ಎಂ.ಕೆ. ಬಿನ್ ಎಂ. ಕೃಷ್ಣಮೂರ್ತಿ 6ನೇ ಕ್ರಾಸ್ ಸಿದ್ದಾರ್ಥನಗರ, ಮದ್ದೂರು |
| 05 | ರಘು ಎಂ.ಆರ್. ಬಿನ್ ರಾಮದಾಸಯ್ಯ 6ನೇ ಕ್ರಾಸ್, ಸಿದ್ಧಾರ್ಥನಗರ,ಮದ್ದೂರು. |

ಶೇ.18ರ 2007–08ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಉಚಿತ ವಿದ್ಯುತ್ ಸಂಪರ್ಕ ಪಡೆಯುವ ಫಲಾನುಭವಿಗಳ ಪಟ್ಟಿ ಮತ್ತು ಪೌರಕಾರ್ಮಿಕರ ಕಾಲೋನಿಯಲ್ಲಿರುವ 10 ಪುರಸಭಾ ವಸತಿ ಗೃಹಗಳನ್ನು ಸೇರಿ.

| ಕ್ರ. ಸಂ. | ಹೆಸರು | ವಿಳಾಸ | ನೀಡಿರುವ ದಾಖಲಾತಿಗಳು | |
|---|---|---|---|---|
| | | | ಜಾತಿ ದೃಡೀಕರಣ ಆದಾಯ ದೃಡೀಕರಣ ಪತ್ರ ಮತ್ತು ಆಸ್ತಿ ದಾಖಲೆ | ಹಂಚಿನ ಮನೆ |
| 01 | ಶ್ರೀಮತಿ ಜಯಮ್ಮ ಕೋಂ ಲೇ. ವೆಂಕಟಯ್ಯ | 6ನೇಕ್ರಾಸ್ , ಸಿದ್ದಾರ್ಥನಗರ ಮದ್ದೂರು | – | ಹಂಚಿನ ಮನೆ |
| 02 | ಚಿಕ್ಕತಾಯಮ್ಮ ಕೋಂ ಲೇ ತಿಮ್ಮಯ್ಯ | 6ನೇ ಕ್ರಾಸ್ ಸಿದ್ದಾರ್ಥನಗರ ಮದ್ದೂರು | | ಶೆಡ್ಡು |
| 03 | ಜವರಯ್ಯ ಕೋಂ ತಿಮ್ಮಯ್ಯ | 3ನೇ ಕ್ರಾಸ್ ಸಿದ್ದಾರ್ಥನಗರ | | ಹಂಚಿನ ಮನೆ |

| | | | | |
|---|---|---|---|---|
| 4 | ವಳ್ಳಿಯಮ್ಮ ಕೋಂ ದೊರಸ್ವಾಮಿ | 5ನೇಕ್ರಾಸ್ , ಸಿದ್ದಾರ್ಥನಗರ | – | ಆರ್.ಸಿ.ಸಿ |
| 5 | ನಾಗಮ್ಮ ಕೋಂ ರಾಜಣ್ಣ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 6 | ಸಾವಿತ್ರಮ್ಮ ಕೋಂ ಲೇ. ಗಿರಿರಾಜು | 6ನೇ ಕ್ರಾಸ್ ಸಿದ್ದಾರ್ಥನಗರ | – | ಶೆಡ್ಡು |
| 7 | ಸೋಮಣ್ಣ ಬಿನ್ ಚಿಕ್ಕಮಾದಯ್ಯ | 5ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 8 | ಸಂಪತ್ ಕುಮಾರ್ ಬಿನ್ ಮಾಸ್ತಯ್ಯ | 2ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 9 | ಲಕ್ಷ್ಮಿ ಕೋಂ ನಾಗ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೆಡ್ಡು |
| 10 | ನಿಂಗಮ್ಮ ಕೋಂ ಮದ್ದೂರ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೆಡ್ಡು |
| 11 | ರಾಮಯ್ಯ ಬಿನ್ ರಂಗಯ್ಯ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 12 | ನಂಜಮ್ಮ ಬಿನ್ ಚೆನ್ನಾರಪ್ಪ | 7ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 13 | ಸರಸಮ್ಮ ಕೋಂ ಶೇಖರ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 14 | ನಾಗಮ್ಮ ಕೋಂ ಲಿಂಗಣ್ಣ | 7ನೇ ಕ್ರಾಸ್ ಸಿದ್ದಾರ್ಥನಗರ | – | ಶೆಡ್ಡು |
| 15 | ಗಂಗಮ್ಮ ಕೋಂ ಲೇ: ದಾಸಯ್ಯ | 6ನೇ ಕ್ರಾಸ್,ಸಿದ್ದಾರ್ಥನಗರ | – | ಶೀಟು |
| 16 | ತಿಮ್ಮಕ್ಕ ಕೋಂ ಲೇ: ಗೋವಿಂದ | 7ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 17 | ಸಿ.ಕುಮಾರ ಬಿನ್ ಲೇ: ಚಿಕ್ಕದೊಡ್ಡಯ್ಯ | ಹೈಸ್ಕೂಲ್ ಹಿಂಭಾಗ ರಾಂರಹೀಂ ನಗರ | – | ಹಂಚಿನ ಮನೆ |
| 18 | ಚುಂಚಯ್ಯ ಬಿನ್ ಲೇ ಗೋಣಯ್ಯ | 5ನೇ ಕ್ರಾಸ್, ಸಿದ್ದಾರ್ಥನಗರ | – | ಶೀಟು |
| 19 | ಶಾರದಮ್ಮ ಕೋಂ ಲೇ. ಮಣಿ | 3ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 20 | ತಿಮ್ಮಮ್ಮ ಕೋಂ ದಾಸಯ್ಯ | ಚನ್ನೇಗೌಡ ಬಡಾವಣೆ | – | ಶೀಟು |
| 21 | ಪ್ರಮೀಳ ಕೋಂ ರಂಗ | 7ನೇ ಕ್ರಾಸ್ ಬಡಾವಣೆ | – | ಹಂಚಿನ ಮನೆ |

| | | | | |
|---|---|---|---|---|
| 22 | ಲಕ್ಷ್ಮಮ್ಮ ಕೋ ಕಾಸಿಮಯ್ಯ | 5ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 23 | ಚಿಕ್ಕತಾಯಮ್ಮ ಕೋಂ ಚಿಕ್ಕಣ್ಣ | 5ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 24 | ಮರಿದೇವರು ಬಿನ್ ಲೇ ಚಿಕ್ಕಮಾದಯ್ಯ | 3ನೇ ಕ್ರಾಸ್, ಸಿದ್ದಾರ್ಥನಗರ | – | ಆರ್.ಸಿ.ಸಿ. |
| 25 | ಶ್ರೀನಿವಾಸ ಬಿನ್ ಲೇ ಕಂಬಯ್ಯ | 2ನೇ ಕ್ರಾಸ್ , ಹೈಸ್ಕೂಲ್ ಹಿಂಭಾಗ, ರಾಂರಹೀಂ ನಗರ | – | ಹಂಚಿನ ಮನೆ |
| 26 | ಜಯಬೋರಮ್ಮ ಕೋಂ ಸಿದ್ದಯ್ಯ | 6ನೇ ಕ್ರಾಸ್ ಹೈಸ್ಕೂಲ್ ಹಿಂಭಾಗ , ರಾಂ ರಹೀಂ ನಗರ | – | ಹಂಚಿನ ಮನೆ |
| 27 | ಅಲಮೇಲಮ್ಮ ಕೋಂ ಲೇ: ದೊಡ್ಡಯ್ಯ | 8ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 28 | ಮರಿಬಸವಯ್ಯ ಬಿನ್ ಲೇ ಬಸವಯ್ಯ | 6ನೇ ಕ್ರಾಸ್ ,ಸಿದ್ದಾರ್ಥನಗರ | – | ಶೀಟು |
| 29 | ಎಂ.ಸಿ.ಹೊನ್ನಯ್ಯ ಬಿನ್ ಲೇ ಗಾಡಿ ಚಿಕ್ಕಣ್ಣ | 6ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 30 | ಮುತ್ತಮ್ಮ ಕೋಂ ಬಸವಯ್ಯ | 6ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 31 | ಚಿಕ್ಕೋಳಮ್ಮ ಕೋಂ ಕರಿಯಯ್ಯ | 5ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 32 | ಪ್ರೇಮಮ್ಮ ಕೋಂ ಶಿವಣ್ಣ | 5ನೇ ಕ್ರಾಸ್ ಸಿದ್ದಾರ್ಥನಗರ | – | ಶೀಟು |
| 33 | ಚಿಕ್ಕಚೌಡಯ್ಯ ಬಿನ್ ದೊಡ್ಡಚಾಡಯ್ಯ | 5ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 34 | ರಾಧ ಕೋಂ ತಿಪ್ಪ | 7ನೇ ಕ್ರಾಸ್ ಸಿದ್ದಾರ್ಥ ನಗರ | – | ಶೆಡ್ಡು |
| 35 | ಆರ್.ಕುಮಾರ ಬಿನ್ ಲೇ: ರಾಜು | 7ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 36 | ವೆಂಕಟಮ್ಮ ಉ. ತಿಮ್ಮಕ್ಕ ಕೋಂ ಜಿ.ಮಂಚಯ್ಯ | 6ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 37 | ಲತಾ ಕೋಂ ಬಂಡಿಗಯ್ಯ | ಚನ್ನೇಗೌಡ ಬಡಾವಣೆ | – | ಶೀಟು |
| 38 | ಮರಿಸಿದ್ದಮ್ಮ ಕೋಂ ಹೊನ್ನಯ್ಯ | ಚನ್ನೇಗೌಡ ಬಡಾವಣೆ | – | ಹಂಚಿನ ಮನೆ |

| | | | | |
|---|---|---|---|---|
| 39 | ಶಿವಮಾದಮ್ಮ ಕೋಂ ದಾಸಯ್ಯ | ಚನ್ನೇಗೌಡ ಬಡಾವಣೆ | – | ಶೀಟು |
| 40 | ನಾಗರಾಜು ಬಿನ್ ರಾಮು | ಚನ್ನೇಗೌಡ ಬಡಾವಣೆ | – | ಹಂಚಿನ ಮನೆ |
| 41 | ಚಿಕ್ಕತಾಯಮ್ಮ ಕೋಂ ಚಂಗೂಡಯ್ಯ | 6ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 42 | ಚಿಕ್ಕಬೋರಮ್ಮ ಕೋಂ ಲೇ ತಮ್ಮಯ್ಯ | 2ನೇ ಕ್ರಾಸ್ ಸಿದ್ದಾರ್ಥನಗರ | – | ಹಂಚಿನ ಮನೆ |
| 43 | ಟಿ.ಮಮತ ಕೋಂ ಎಸ್. ಮುತ್ತರಾಜು | 5ನೇ ಕ್ರಾಸ್ ರಾಂರಹೀಂ ನಗರ | – | ಶೆಡ್ಡು |

**ವಿಷಯ:– 56/34:–** ಶ್ರೀ ಎಂ. ನಂಜುಂಡಪ್ಪ ಮತ್ತು ಸಾರ್ವಜನಿಕರು ದಿನಾಂಕ:29–03–2008 ರಂದು ಮನವಿ ಸಲ್ಲಿಸಿ ಸರ್ಕಾರಿ ರೇಷ್ಮೆ ಪಾರಂ ನ 13 ಎಕರೆ ಜಮೀನು ಕೆ.ಎಸ್.ಎಸ್.ಐ.ಪಿ.ಸಿ.ಗೆ ವರ್ಗಾವಣೆಯಾಗುವ ಹಂತದಲ್ಲಿದ್ದು, ಸದರಿ ಜಮೀನನ್ನು ಪುರಸಭೆಗೆ ತೆಗೆದುಕೊಂಡು ಪುರೋಭಿವೃದ್ದಿಗೆ ಅನುಕೂಲವಾಗುವಂತೆ ಉಪಯೋಗಿಸಲು ಕೋರಿದ್ದು, ಈ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:–** ಚರ್ಚಿಸಲಾಯಿತು. ಸಾರ್ವಜನಿಕ ಹಿತದೃಷ್ಠಿಯಿಂದ ಸರ್ಕಾರಿ ರೇಷ್ಮೆ ಫಾರಂಗೆ ಸೇರಿದ 13 ಎಕರೆ ಜಮೀನನ್ನು ಪುರಸಭೆಗೆ ಕೂಡಿಸಿಕೊಡಲು ಸಂಬಂಧಪಟ್ಟವರನ್ನು ಕೋರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. **ಇನ್ನಾವುದೇ ಇತರೆ ವಿಷಯಗಳು ಇಲ್ಲದಿರುವುದರಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

(ಸಹಿ)
ಅದ್ಯಕ್ಷರು,
ಪುರಸಭೆ – ಮದ್ದೂರು.

# ಪುರಸಭಾ ಕಾರ್ಯಾಲಯ, ಮದ್ದೂರು

**ನಂ:ಸಭೆ ಸಂಖ್ಯೆ / 3 /2008-09** **ದಿನಾಂಕ:31-05-2008**

ದಿನಾಂಕ: 31-05-2008ನೇ ಶನಿವಾರ ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಪುರಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ರವರ ಅಧ್ಯಕ್ಷತೆಯಲ್ಲಿ ಎಸ್. ಎಂ ಕೃಷ್ಣ ಸಭಾಂಗಣದಲ್ಲಿ ಉಪಾಧ್ಯಕ್ಷರು, ಸದಸ್ಯರುಗಳು ಸೇರಿ ನಡೆಸಿದ ಸಾಮಾನ್ಯ ಸಭೆಯ ನಡವಳಿಕೆಗಳು.

ಹಾಜರಿ -24 ಗೈರುಹಾಜರಿ -2 ಜುಮ್ಲಾ -22

****

ವಿಷಯ:-2 :-ದಿನಾಂಕ: 31-03-2008 ರಂದು ನಡೆದ ಸಾಮಾನ್ಯ ಸಭೆ ಹಾಗೂ ದಿನಾಂಕ: 11-04-2008 ರಂದು ನಡೆದ ಆಯ-ವ್ಯಯ ಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವುದು.

ತೀರ್ಮಾನ:-ಓದಿ ರೆಕಾರ್ಡು ಮಾಡಲಾಯಿತು.

ವಿಷಯ:-3 2008ನೇ ಏಪ್ರಿಲ್ ಮಾಹೆಯ ಜನನ -ಮರಣ ವರದಿಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

ಜನನ-69 ಮರಣ-18 ಜುಮ್ಲಾ -87

ತೀರ್ಮಾನ:- ಓದಿ ರೆಕಾರ್ಡು ಮಾಡಲಾಯಿತು.

ವಿಷಯ:-4 2008ನೇ ಏಪ್ರಿಲ್ ಮಾಹೆಯ ಜಮಾ ಖರ್ಚು ವಿವರವನ್ನು ಓದಿ ಅಂಗೀಕರಿಸುವ ವಿಚಾರ.

ತೀರ್ಮಾನ:- 2008ನೇ ಏಪ್ರಿಲ್ ಮಾಹೆಯ ಜಮಾ ಖರ್ಚು ವಿವರವನ್ನು ಓದಿ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ವಿಷಯ:-5 ದಿನಾಂಕ: 24-05-2008 ರಂದು ನಡೆದ ಸ್ಥಾಯಿ ಸಮಿತಿ ಸಭೆ ನಡವಳಿಕೆಗಳನ್ನು ಓದಿ ಅನುಮೋದಿಸುವ ವಿಚಾರ.

ತೀರ್ಮಾನ:- ಓದಿ ಅನುಮೋದಿಸಲಾಯಿತು.

ವಿಷಯ:–6 ಕಾರ್ಮಿಕ ನ್ಯಾಯಾಲಯ, ಉಪ ವಿಭಾಗ–2 ಮಂಡ್ಯ ರವರ ಪ್ರಕರಣ ಸಂಖ್ಯೆ ಡಬ್ಲುಸಿಎ ಎನ್ ಎಫ್.ಸಿ/ಸಿಆರ್ 140 /06 ದಿನಾಂಕ: 18–02–2008ರ ಪತ್ರದ ಮೇರಂಗೆ ಶ್ರೀ ರಾಜು ಬಿನ್ ಸಿದ್ದಪ್ಪ ಚನ್ನೇಗೌಡ ಬಡಾವಣೆ ಮದ್ದೂರು ರವರಿಗೆ ವಿದ್ಯುತ್ ಅಪಘಾತ ಪರಿಹಾರದ ಹಣವನ್ನು ಪಾವತಿಸಲು ಆದೇಶವಾಗಿದ್ದು ಈ ಬಗ್ಗೆ ಪುರಸಭೆ ವಕೀಲರಿಂದ ಬಂದಿರುವ ಕಾನೂನು ಸಲಹೆ ಪತ್ರದ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:– ಕಾರ್ಮಿಕ ನ್ಯಾಯಾಲಯದ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಸದರಿ ವಿಷಯದ ಬಗ್ಗೆ ಕಾರ್ಮಿಕ ನ್ಯಾಯಾಲಯದ ಆದೇಶದ ವಿರುದ್ದ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಹಾಗು ಪುರಸಭೆ ವಕೀಲರಿಂದ ಬಂದಿರುವ ಅಭಿಪ್ರಾಯದಂತೆ ರೂ.1,01,513–00 ರೂ.ಗಳನ್ನು ಠೇವಣಿ ಇಡಲು ಹಾಗು ವಕೀಲರನ್ನು ಗೊತ್ತು ಪಡಿಸುವ ಬಗ್ಗೆ ಅಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿರವರುಗಳಿಗೆ ಅಧಿಕಾರ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು,

ವಿಷಯ:–7 ಅನಧಿಕೃತವಾಗಿ ಕೊಳಾಯಿ ಸಂಪರ್ಕ ಪಡೆದಿರುವ ಖಾತಾದಾರರುಗಳಿಂದ ದಂಡ ಶುಲ್ಕ ವಸೂಲಿ ಮಾಡಿ ಸಕ್ರಮಗೊಳಿಸುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:–ವಿಷಯವನ್ನು ಚರ್ಚಿಸಲಾಯಿತು. ಪುರಸಭೆ ವ್ಯಾಪ್ತಿಯಲ್ಲಿ ಅನಧಕೃತ ಸಂಪರ್ಕ ಪಡೆದಿರುವ ಖಾತಾದಾರರುಗಳಿಂದ ನಲ್ಲಿ ಸಂಪರ್ಕ ಫೀ ರೂ. 1850–00 ಹಾಗೂ ದಂಡ ರೂ. 150–00 ಗಳನ್ನು ಸೇರಿ ಒಟ್ಟು 2000–00 ರೂ.ಗಳನ್ನು ಪಾವತಿಸಿಕೊಂಡು ದಿನಾಂಕ 30–09–2008 ರೊಳಗೆ ಸಕ್ರಮಗೊಳಿಸುವುದು ಎಂದು ಸಭೆಯು ತೀರ್ಮಾನಿಸಿತು.

ವಿಷಯ:–8 ಪುರಸಭೆಯಲ್ಲಿ ಖಾತೆ ದಾಖಲಾಗದೆ ಇರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅನಾಕ್ಷೇಪಣಾ ಪತ್ರ ನೀಡುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:–ವಿಷಯವನ್ನು ಚರ್ಚಿಸಲಾಯಿತು. ಪುರಸಭೆಯಲ್ಲಿ ಖಾತೆ ದಾಖಲಾಗದೆ ಇರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅನಾಕ್ಷೇಪಣಾ ಪತ್ರ ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು ಮುಖ್ಯಾಧಿಕಾರಿಗಳು ಸಭೆಗೆ ವಿವರಿಸಿದರು. ಸದಸ್ಯರು ಇಂತಹ ಕಟ್ಟಡಗಳಿಗೆ ಎನ್.ಓ.ಸಿ ಕೊಡುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲು ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರುವುದು ಎಂದು ಸಭೆಯು ತೀರ್ಮಾನಿಸಿತು.

ವಿಷಯ:–9 ಪುರಸಭೆಯಲ್ಲಿ ಖಾತೆ ದಾಖಲಾಗಿ ಸ್ವತ್ತಿಗೆ ಹೊಂದಿಕೊಂಡಂತೆ ಇರುವ ಪುರಸಭೆಗೆ ಸೇರಿದ ನಿವೇಶನಗಳನ್ನು ಕಿಮ್ಮತ್ತು ಧರಕ್ಕೆ ಅರ್ಹರಿಗೆ ನೀಡುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:– ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದ ಸುತ್ತೋಲೆ ಪ್ರಕಾರ ಖಾಸಗಿ ಸ್ವತ್ತಿಗೆ ಹೊಂದಿಕೊಂಡಂತೆ ಇರುವಂತಹ ನಿವೇಶನ ಹಾಗೂ ಕನ್ಸರ್ವೆನ್ಸಿ ಗಲ್ಲಿಗಳನ್ನು ಬಾಜುದಾರರುಗಳಿಗೆ ಕಿಮ್ಮತ್ತು ಧರಕ್ಕೆ ನೀಡಲು ಅವಕಾಶವಿರುವುದಿಲ್ಲವೆಂದು ಮುಖ್ಯಾಧಿಕಾರಿಗಳು ಸಭೆಗೆ ವಿವರಿಸಿದರು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಅನುಮೋದನೆ ಪಡೆದು ಕನ್ಸರ್ವೆನ್ಸಿ ಗಲ್ಲಿಗಳನ್ನು ಬಾಜುದಾರರಿಗೆ ಸಮನಾಗಿ ಕಿಮ್ಮತ್ತು ಧರಕ್ಕೆ ಮಂಜೂರು ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ:–10 ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಪೌನಿ/ಯುಪಿಎ/ ಸ್ವಜಯೋ/ಸಿಆರ್/16/2007–08 ದಿನಾಂಕ:31–03–2008 ರಂತೆ ಎಸ್.ಜೆ.ಎಸ್.ಆರ್.ವೈ.ಯೋಜನೆಯ ಚಟವಟಿಕೆಗಳಾದ ಸಮುದಾಯ ಅಭಿವೃದ್ದಿ ಸಂಘದ ಸಭೆಗಳಿಗೆ, ತರಬೇತಿಗಳಿಗೆ, ಗುಂಪುಗಳ ಕಾರ್ಯ ಚರ್ಚಿಸಲು ಸಮುದಾಯ ಭವನ ನಿರ್ಮಿಸಲು ಪುರಸಭಾ ಸ್ಥಳದ ಜಾಗದ ಪೂರ್ಣವಿವರ ಹಾಗೂ ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಅಂದಾಜನ್ನು ತಯಾರಿಸಿ ಕಳುಹಿಸಲು ಕೋರಿದ್ದು ಚರ್ಚಿಸುವ ವಿಚಾರ.

ತೀರ್ಮಾನ:– ವಿಷಯವನ್ನು ಚರ್ಚಿಸಲಾಯಿತು. ಅಭಿಯಂತರರ ಮತ್ತು ರಾಜಸ್ವ ನಿರೀಕ್ಷಕರ ವರದಿ ಪಡೆದು ಕಛೇರಿಯ ಬಲ ಭಾಗದಲ್ಲಿ 40 * 50 ಅಡಿ ಖಾಲಿ ನಿವೇಶನದಲ್ಲಿ ಸಮುದಾಯ ಭವನ ನಿರ್ಮಿಸಲು ತೀರ್ಮಾನಿಸಲಾಯಿತು. ಹಾಗೂ 15 ಲಕ್ಷ ರೂ ಗಳಿಗೆ ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಮಾನ್ಯ ನಿರ್ಧೇಶಕರಿಗೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ:–11 ಶಿವಪುರದ ನೀರು ಸರಬರಾಜು ವಸತಿ ಗೃಹದ ಬಳಿ 10ನೇ ಹಣಕಾಸು ಯೋಜನೆಯಡಿ ನಿರ್ಮಿಸಿರುವ ಪುರಸಭೆಯ 11 ಸಂಖ್ಯೆ ಅಂಗಡಿ ಮಳಿಗೆಗಳ ಅವಧಿ ಮುಗಿದಿದ್ದು, ಮರು ಹರಾಜು ಮಾಡಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:–ವಿಷಯದ ಬಗ್ಗೆ ಚರ್ಚಿಸಲಾಯಿತು. ಮುಖ್ಯಾಧಿಕಾರಿಗಳು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರಿಂದ ಬಂದಿರುವ ಸುತ್ತೋಲೆ ಸಂಖ್ಯೆ:ಪೌನಿ/ಐ.ಡಿ.ಎಸ್. ಎಂ.ಟಿ..ಸಿ.ಆರ್ 26/2004–05 ದಿನಾಂಕ: 04–05–2006 ರ ಸುತ್ತೋಲೆಯನ್ನು ಓದಿ ಸಭೆಯ ಗಮನಕ್ಕೆ ತಂದರು. ಹಾಲಿ ಖಾಲಿ

ಇರತಕ್ಕಂತಹ ಮಳಿಗೆಗಳನ್ನು ಹರಾಜು ಮಾಡಿ ಹರಾಜು ನಿಂತ ಮೊತ್ತಕ್ಕೆ ಉಳಿದ ಅಂಗಡಿ ಬಾಡಿಗೆದಾರರು ಬದ್ಧರಿದ್ದಲ್ಲಿ ಅವರನ್ನೇ ಮುಂದುವರೆಸುವುದು, ತಪ್ಪಿದಲ್ಲಿ ಎಲ್ಲಾ ಮಳಿಗೆಗಳ ಬಾಡಿಗೆದಾರರುಗಳಿಂದ ಉಳಿದ ಬಾಡಿಗೆ ವಸೂಲಿಸಿ ಹರಾಜು ಮಾಡಲು ಸರ್ವಾನುಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.

ವಿಷಯ:–12 ಮದ್ದೂರು ಟೌನ್ ಕೆ.ಇ,ಬಿ ಪಕ್ಕದಲ್ಲಿ ನಿರ್ಮಾಣಗೊಂಡು ಬಾಡಿಗೆ ನೀಡಿರುವ ಕಾಲಾವಧಿ 09–07–2008ಕ್ಕೆ ಮುಕ್ತಾಯಗೊಳ್ಳಲಿದ್ದು, ಸದರೀ ಅಂಗಡಿ ಮಳಿಗೆಗಳನ್ನು ಮರು ಹರಾಜು ಮಾಡಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:–ಚರ್ಚಿಸಲಾಯಿತು. ಪೌರಾಡಳಿತ ನಿರ್ದೇಶನಾಲಯದಿಂದ ಬಂದಿರುವ ಸುತ್ತೋಲೆ ಸಂಖ್ಯೆ ಪೌನಿ/ಐ.ಡಿ.ಎಸ್.ಎಂ.ಟಿ.ಸಿ.ಆರ್.26/2004–05 ದಿನಾಂಕ:04–05–2006ರ ಸುತ್ತೋಲೆಯನ್ನು ಮುಖ್ಯಾಧಿಕಾರಿಗಳು ಸಭೆಗೆ ಓದಿ ತಿಳಿಸಿದರು. ಸುತ್ತೋಲೆ ಪ್ರಕಾರ ಬಹಿರಂಗ ಹರಾಜು ಕ್ರಮ ವಹಿಸಲು ತಿಳಿಸಲಾಯಿತು. ಅಧಕ್ಷರು ಶೇ.10 ಬಾಡಿಗೆ ಹೆಚ್ಚಳ ಮಾಡಿ ಹಾಲಿ ಇರತಕ್ಕಂತಹ ಬಾಡಿಗೆದಾರರುಗಳನ್ನು ಮುಂದುವರೆಸಲು ಸೂಚಿಸಿದರು. ರಾಜಸ್ವ ನಿರೀಕ್ಷಕರು ಹಾಲಿ ಇರತಕ್ಕ ಬಾಡಿಗೆದಾರರಲ್ಲಿ ಕೆಲವರು ಹಲವಾರು ತಿಂಗಳುಗಳ ಬಾಡಿಗೆ ಉಳಿಸಿಕೊಂಡಿದ್ದು, ಪಾವತಿಸಿರುವುದಿಲ್ಲವೆಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡುತ್ತಾ ಬಾಕಿ ಇರುವ ಬಾಡಿಗೆ ಹಣವನ್ನು ತಿಂಗಳೊಳಗೆ ಪಾವತಿಸಲು ನೋಟಿಸ್ ನೀಡಿ ಮುಂದಿನ ಸಭೆಗೆ ವಿಷಯ ಮಂಡಿಸಲು ಸೂಚಿಸಿದರು. ಸಭೆಯು ಸ್ಥಾಯಿ ಸಮಿತಿ ಅಧ್ಯಕ್ಷರ ಸೂಚನೆಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದನೆ ನೀಡಿತು.

ವಿಷಯ:–13 ಶ್ರೀ ಅಜೀಜ್ ಖಾನ್ ಬಿನ್ ಬೀರಾಂಖಾನ್ ಮುಸ್ಲಿಂ ಬ್ಲಾಕ್ ಮದ್ದೂರು ಟೌನ್ ರವರು ದಿನಾಂಕ: 22–04–2008 ರಂದು ಮನವಿ ಸಲ್ಲಿಸಿ ದಿನಾಂಕ: 30–03–2008 ರಂದು ನಡೆದ ವಿದ್ಯುತ್ಚ್ಛಕ್ತಿ ಅಪಘಾತದಲ್ಲಿ ತನ್ನ ಮಗ ಮೃತನಾಗಿದ್ದು,ಪರಿಹಾರ ಕೊಡಿಸಿ ಕೊಡಲು ಕೋರಿದು, ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:–ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರ ಮಂಜೂರಾತಿ ಪಡೆದು ರೂ.5000–00(ಐದು ಸಾವಿರ) ರೂಪಾಯಿಗಳನ್ನು ದಿನಾಂಕ: 30–03–2008 ರಂದು ವಿದ್ಯುತ್ ಅಘಘಾತದಲ್ಲಿ ಮೃತಪಟ್ಟ ಬಾಲಕನ ವಾರಸುದಾರರಿಗೆ ಪಾವತಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ:-14 ಅಧ್ಯಕ್ಷರು ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರ ಸಂಘ (ರಿ) ಮದ್ದೂರು ರವರು ದಿನಾಂಕ: 03-03-2008 ರಂದು ಮನವಿ ಸಲ್ಲಿಸಿ ಶ್ರೀ ಶನೀಶ್ವರ ಸ್ವಾಮಿಯ ದೇವರ ಜಾತ್ರೆ ಅಂಗವಾಗಿ ನಡೆದ ಸಮಾರಂಭಕ್ಕೆ ಧನ ಸಹಾಯ ಕೋರಿ ಸಲ್ಲಿಸಿರುವ ಮನವಿ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:-ಸಭೆಯಲ್ಲಿ ಚರ್ಚಿಸಲಾಯಿತು. ಪುರಸಭೆಯಿಂದ ಧನಸಹಾಯವಾಗಿ ಸದರಿ ಸಮಾರಂಭಕ್ಕೆ 500-00 ರೂ.ಗಳನ್ನು (ಐದುನೂರು) ಪಾವತಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ:-15 ಪ್ರತಿ ಮನೆ ಮನೆಗಳಿಂದ ಕಸ ಸಂಗ್ರಹಿಸಲು ಸರ್ಕಾರದ ಆದೇಶ ಸಂ: ನಅಇ23, ಟಿಸಿಟಿ 2004 ದಿನಾಂಕ: 06-01-2005ರಂತೆ ಪ್ರತಿ ಮನೆಯಿಂದ ರೂ.20-00 ಪ್ರತಿ ಅಂಗಡಿಗಳಿಂದ ರೂ.50-00, ಪ್ರತಿ ಹೋಟೆಲ್ ಗಳಿಂದ ರೂ.100-00 ಹಾಗೂ ಪ್ರತಿ ಕಲ್ಯಾಣ ಮಂಟಪಗಳಿಂದ ರೂ.250-00 ಮತ್ತು ಪ್ರತಿ ಕಾರ್ಯಕ್ರಮಕ್ಕೆ ರೂ. 200-00 ಗಳನ್ನು ಬಳಕೆ ಶುಲ್ಕ (USER FEE) ನಿಗಧಿಪಡಿಸಿದ್ದು, ಈ ಸಂಬಂಧ ತೀರ್ಮಾನ ಕೈಗೊಳ್ಳುವ ಬಗ್ಗೆ.

ತೀರ್ಮಾನ 15:-ಚರ್ಚಿಸಲಾಯಿತು. ಸರ್ಕಾರಿ ಆದೇಶ ಸಂ: ನಅಇ 23 ಟಿಸಿಟಿ 2004 ದಿನಾಂಕ: 06-01-2005 ರಂತೆ ಪ್ರತಿ ಮನೆಗಳಿಂದ ನಿಗಧಿಪಡಿಸಲಾದ ಬಳಕೆ ಶುಲ್ಕ ಅಧಿಕವಾದ್ದರಿಂದ ಶ್ರೀಮತಿ ಅನುಸೂಯ ಶಿವಪ್ಪರವರು ಚರ್ಚಿಸಿದಂತೆ ಮನೆಗಳಿಂದ ರೂ. 10=00, ಪ್ರತಿ ಅಂಗಡಿಗಳಿಂದ ರೂ. 50=00, ಪ್ರತಿ ಚಿಕ್ಕ ಹೋಟೆಲ್‌ಗಳಿಂದ ರೂ. 50=00, ಪ್ರತಿ ದೊಡ್ಡ ಹೋಟೆಲ್‌ಗಳಿಂದ ರೂ. 100=00 ಹಾಗೂ ಪ್ರತಿ ಕಲ್ಯಾಣ ಮಂಟಪಗಳಿಂದ ರೂ. 250=00 ಮತ್ತು ಪ್ರತಿ ಕಾರ್ಯಕ್ರಮಕ್ಕೆ ರೂ. 200=00 ಗಳನ್ನು ಬಳಕೆ ಶುಲ್ಕವಾಗಿ ನಿಗಧಿಪಡಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:- 16 ಅಧ್ಯಕ್ಷರ ಅಪ್ಪಣೆ ಮೇರೆ ಚರ್ಚೆಗೆ ಬರಬಹುದಾದ ಇತರೆ ವಿಷಯಗಳು**

ವಿಷಯ: 16/1:-12ನೇ ಹಣಕಾಸು ಅನುದಾನದಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಸರ್ಕಾರಿ ಆದೇಶಸಂಖ್ಯೆ ಗ್ರಾ.ಅ.ಪ.46/ಆರ್.ಆರ್.ಸಿ -06 /29-03-2007 2006-07ನೇ ಸಾಲಿನಲ್ಲಿ 5.0 ಲಕ್ಷ ಹಾಗೂ ನಅಇ 69/ಎಸ್.ಎಫ್.ಸಿ./06/16-1-08 ರಲ್ಲಿ 2007-08 ನೇ ಸಾಲಿನಲ್ಲಿ 5.0.ಲಕ್ಷ ಹಾಗು ನಅಇ 69/ಎಸ್.ಎಫ್.ಸಿ./06/31-03-2008 ರಲ್ಲಿ 5.0 ಲಕ್ಷ ಹಾಗೂ ಸಾರ್ವಜನಿಕ ಕಟ್ಟಡ ನಿರ್ವಹಣೆಗಾಗಿ ನಅಒ 46 /ಎಸ್.ಎಫ್.ಸಿ 06/31-03-08ರಲ್ಲಿ 0.50ಲಕ್ಷ ಗಳಿಗೆ ಕ್ರಿಯಾಯೋಜನೆ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:–ಮೇಲ್ಕಂಡ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಮಾಡಲು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಆಡಳಿತಾತ್ಮಕ ಮಂಜೂರಾತಿ ನೀಡಲು ಸಭೆಯು ಒಪ್ಪಿ ತೀರ್ಮಾನಿಸಿತು.

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು |
|---|---|---|
| 01 | ವಾರ್ಡ್–8ರಲ್ಲಿ ವಿ.ವಿ.ನಗರ 4ನೇ ಕ್ರಾಸ್ ನಲ್ಲಿ ಕೆಮಣ್ಣು ನಾಲೆಗೆ ಡೆಕ್ ನಿರ್ಮಾಣ | 10.00ಲಕ್ಷ |
| 02 | ವಾರ್ಡ್–7ರಲ್ಲಿ ವಿವೇಕಾನಂದ ಬಡಾವಣೆ , ವಾರ್ಡ್6ರಲ್ಲಿ ಲೀಲಾವತಿ ಬಡಾವಣೆ ಗಣಪತಿದೇವಸ್ಥಾನದ ಹತ್ತಿರ, ವಾರ್ಡ್ 1 ರಲ್ಲಿ ಚನ್ನೇಗೌಡನದೊಡ್ಡಿಯಲ್ಲಿ ಕೃಷ್ಣನ ಮನೆ ಹಿಂಭಾಗ , ಮತ್ತು ಮುಂಭಾಗದ ರಸ್ತೆ , ವಾರ್ಡ್–3 ರಲ್ಲಿ ಪಿ.ಡಬ್ಲ್ಯೂ.ಡಿ. ಕಛೇರಿ ಹಿಂಬಾಗ ಶ್ರೀನಿವಾಸ್ ಮನೆ ಹತ್ತಿರ ಚನ್ನೇಗೌಡನದೊಡ್ಡಿ ಕೃಷ್ಣಪ್ಪರ ಮನೆ ಹತ್ತಿರ (ದೇವಸ್ಥಾನಕ್ಕೆ) | 2.50 ಲಕ್ಷ |
| 03 | ಸಿದ್ದಾರ್ಥನಗರದಲ್ಲಿ 5,6,7,8ನೇ ಕ್ರಾಸ್‌ಗೆ ಡೆಕ್ ನಿರ್ಮಾಣ | 2.50 ಲಕ್ಷ |
| 04 | ವಾರ್ಡ್–12ರಲ್ಲಿ ಪುರಸಭೆಯ ಅಂಬೇಡ್ಕರ್ ಭವನದ ದುರಸ್ಥಿ ಗಾಗಿ | 0.50 ಲಕ್ಷ |
| | ಒಟ್ಟು ಮೊತ್ತ | 15,50,000=00 |

ವಿಷಯ: 16/2 ಮದ್ದೂರು ಪಟ್ಟಣದ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ಹಿಡಿಯುವ ಬಗ್ಗೆ.

ತೀರ್ಮಾನ: ಚರ್ಚಿಸಲಾಯಿತು. ಬೀದಿ ನಾಯಿಗಳನ್ನು ಹಿಡಿಯಲು ನಿಯಮಾನುಸಾರ ಕ್ರಮವಹಿಸಲು ತೀರ್ಮಾನಿಸಲಾಯಿತು.

ವಿಷಯ:–16/3 ಖಾಸಗಿ ಬಸ್ಸು ನಿಲ್ದಾಣದ ಸುಂಕ ವಸೂಲಾತಿಗಾಗಿ ಕಳೆದ ಐದಾರು ವರ್ಷಗಳ ಹಿಂದೆ ಖಾಸಗಿ ಬಸ್ ನಿಲ್ದಾಣದ ಸುಂಕ ವಸೂಲಾತಿಯು ಬಹಿರಂಗ ಹರಾಜು ಮೂಲಕ ಕಾರಣಾಂತರಗಳಿಂದ ವಿಲೇವಾರಿ ಆಗದಿದ್ದ ಸಂದರ್ಭದಲ್ಲಿ ಕಛೇರಿ ನೌಕರರಿಂದ ಸುಂಕ ವಸೂಲಾತಿ ಮಾಡಿಸುವ ಉದ್ದೇಶಕ್ಕೆ. ಈ ಹಿಂದೆ ಪುರಸಭೆಯಿಂದ ಮುದ್ರಿಸಲಾಗಿದ್ದ ದ್ವಿಪ್ರತಿಯಲ್ಲಿರುವ 422 ಸಂಖ್ಯೆ ರಶೀತಿ ಪುಸ್ತಕಗಳು ಅನುಪಯುಕ್ತಗೊಂಡು ದಾಸ್ತಾನಿನಲ್ಲಿ ಉಳಿದಿದ್ದು ಪ್ರಸ್ತುತ ಖಾಸಗಿ ಬಸ್ ನಿಲ್ದಾಣ ಶುಲ್ಕ ವಸೂಲಿಯು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಆಗುತ್ತಿರುವುದರಿಂದ ಪ್ರತಿ ವರ್ಷದ ಆಡಿಟ್ ವೇಳೆ ಸದರಿ ರಶೀತಿ ಪುಸ್ತಕಗಳನ್ನು ನಾಶ ಪಡಿಸುವಂತೆ ಸೂಚಿಸುತ್ತಿರುವ ಮೇರೆಗೆ ರಶೀತಿ ಪುಸ್ತಕಗಳನ್ನು ನಾಶ ಪಡಿಸುವ ಬಗ್ಗೆ ಚರ್ಚಿಸ ತಕ್ಕ ವಿಚಾರ.

ತೀರ್ಮಾನ:– ಸಭೆಯಲ್ಲಿ ಚರ್ಚಿಸಲಾಯಿತು, ಖಾಸಗಿ ಬಸ್ಸು ನಿಲ್ದಾಣದ ಸುಂಕ ವಸೂಲಾತಿಯು ಬಹಿರಂಗ ಹರಾಜು ಮೂಲಕ ನಡೆಯದೇ ಇರುವ ಸಂದರ್ಭಗಳಲ್ಲಿ ಕಛೇರಿ ನೌಕರರಿಂದ ಸಂಗ್ರಹಿಸಲು ಈ ಹಿಂದೆ ಮುದ್ರಿಸಲಾಗಿದ್ದ ದ್ವಿಪ್ರತಿಯಲ್ಲಿರುವ ರಶೀತಿ ಪುಸ್ತಕಗಳು ಹಾಲಿ ಖಾಸಗಿ ಬಸ್ಸು ನಿಲ್ದಾಣ ಸುಂಕವಸೂಲಾತಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಆಗುತ್ತಿರುವುದರಿಂದ ಕಛೇರಿ ದಾಸ್ತಾನಿನಲ್ಲಿ ಅನುಪಯುಕ್ತವಾಗಿ ಉಳಿದಿರುತ್ತವೆ. ಸದರಿ ವಿಚಾರವಾಗಿ ಪ್ರತೀ ವರ್ಷ ನಡೆಯುವ ಲೆಕ್ಕ ಪರಿಶೋಧನೆ ವೇಳೆ ಆಕ್ಷೇಪಣೆ ವ್ಯಕ್ತವಾಗುತ್ತಿರುವುದರಿಂದ ಲೆಕ್ಕ ಪರಿಶೋಧಕರ ಸೂಚನೆ ರೀತ್ಯಾ ರಶೀತಿ ಪುಸ್ತಕಗಳನ್ನು ರದ್ದು ಪಡಿಸಿ ನಾಶಪಡಿಸಲು ಸಭೆ ಸರ್ವಾನು ಮತದಿಂದ ತೀರ್ಮಾನಿಸಿತು.

ವಿಷಯ: 16/4 : – ಮದ್ದೂರು ತಾಲ್ಲೂಕು ಸಭಾ ಹೋಬಳಿ ಮದ್ದೂರು ಗ್ರಾಮದ ಕೆಳಕಂಡ ಸರ್ವೆನಂಬರ್‌ಗಳಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಂಜೂರು ಮಾಡಲು ಪುರಸಭೆಯಿಂದ ಅಭಿಪ್ರಾಯ ಕೋರಿ ಮಾನ್ಯ ಜಿಲ್ಲಾಧಿಕಾರಿರವರಿಂದ ಬಂದಿರುವ ಪತ್ರಗಳು.

1) ಟಿ. ಮಲ್ಲೇಶ್ ಬಿನ್ ಕೆ.ತಮ್ಮಯ್ಯ ಸರ್ವೆ ನಂಬರ್ 743/1ರಲ್ಲಿ 0–02 1/4 ಗುಂಟೆ

2) ಆರ್. ಪುಷ್ಪಲತಾ ಕೋಂ ರಾಮಣ್ಣ ಸರ್ವೆ ನಂಬರ್ 76/1ಎ/ಎ/ಎ ರಲ್ಲಿ 0–05 ಗುಂಟೆ

ತೀರ್ಮಾನ:– ಮಾನ್ಯ ಜಿಲ್ಲಾಧಿಕಾರಿ ರವರು ಮಂಡ್ಯ ಜಿಲ್ಲೆ ಮಂಡ್ಯ ರವರಿಂದ ವಸತಿ ಉದ್ದೇಶಕ್ಕೆ ಭೂಪರಿರ್ವನೆ ಮಾಡಿಕೊಳ್ಳಲು ಪುರಸಭೆಯಿಂದ ಅಭಿಪ್ರಾಯ ಕೋರಿ ಬಂದಿರುವ ಪತ್ರಗಳನ್ನು ಸಭೆಯಲ್ಲಿ ಓದಲಾಯಿತು. ಸದರಿ ವಿಷಯದ ಬಗ್ಗೆ ಕಛೇರಿಯ ಅಭಿಯಂತರರು ವರದಿಯಂತೆ ಈ ಕೆಳಕಂಡ ಸರ್ವೆನಂಬರ್ ಗಳಿಗೆ ವಸತಿ ಉದ್ದೇಶಕ್ಕೆ ಭೂ ಪರಿರ್ವನೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

1) ಟಿ. ಮಲ್ಲೇಶ್ ಬಿನ್ ಕೆ.ತಮ್ಮಯ್ಯ ಸರ್ವೆ ನಂಬರ್ 743/1ರಲ್ಲಿ 0–02 1/4 ಗುಂಟೆ

2) ಆರ್. ಪುಷ್ಪಲತಾ ಕೋಂ ರಾಮಣ್ಣ ಸರ್ವೆ ನಂಬರ್ 76/1ಎ/ಎ/ಎ ರಲ್ಲಿ 0–05 ಗುಂಟೆ

ವಿಷಯ: 16/5:– ನಂದಿನಿ ಕ್ಷೀರ ಕೇಂದ್ರ ತೆರೆಯಲು ಅನುಮತಿ ಕೋರಿರುವ ಬಗ್ಗೆ ಶ್ರೀ ಎಸ್. ಮಹೇಶ್ ಸಿದ್ದಾರ್ಥನಗರ 4ನೇ ಕ್ರಾಸ್ ಮದ್ದೂರು ರವರು ಮನವಿ ಸಲ್ಲಿಸಿ ಸಹಾಯಕ ಕಾರ್ಯಪಾಲಕರ ಇಂಜಿನಿಯರ್ ಕಛೇರಿ ಸಂಜಯ ಟಾಕೀಸ್ ಹತ್ತಿರ ರಸ್ತೆ ಪಕ್ಕದಲ್ಲಿ ನಂದಿನಿ ಕ್ಷೀರ ಕೇಂದ್ರ ನಡೆಸಲು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ :– ಚರ್ಚಿಸಲಾಯಿತು. ಸದರಿ ವಿಷಯಕ್ಕೆ ಸಂಭಂಧ ಪಟ್ಟ ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಅಂದರೆ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಸ್ಥಳವಾದ್ದರಿಂದ ಸದರಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಇತ್ಯಾದಿ ಹಾಗೂ ಪುರಸಭೆಯ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ:–16/6:–ಇಂಧನ ಉಳಿತಾಯ ಕಾರ್ಯಕ್ರಮಕ್ಕೆ ಸರ್ಕಾರದಿಂದ 10.00 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು ,ಇದಕ್ಕೆ ಸಂಬಂದಪಟ್ಟಂತೆ ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಮುನಿಸಿ(1) 69 /2007–08 ದಿನಾಂಕ: 18–07–2007 Energy management system to Street lights ಗೆ 7.00 ಲಕ್ಷ ರೂ ಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು ಉಳಿಕೆ 3.00 ಲಕ್ಷ ರೂ.ಗಳಿಗೆ Sensors to water supply installation & solar street light ಗೆ ದೊರಕಿದ್ದು ಈ ಹಿಂದೆ ದಿನಾಂಕ:30–08–2007ರಂದು ಟೆಂಡರ್ ಕರೆಯಲಾಗಿದ್ದು Energy management system to Street lights ಗೆ ಏಕ ಟೆಂಡರ್ ಬಂದಿದ್ದು ಮತ್ತು Sensors to water supply installation & solar street light ಗೆ ಸಮರ್ಪಕವಾದ ಟೆಂಡರ್ ಬಾರದ ಕಾರಣ, ಒಟ್ಟು 10.00 ಲಕ್ಷ (ಹತ್ತು ಲಕ್ಷ ) ರೂ.ಗಳಿಗೆ Energy mangement system to Street lights ಗೆ ವೆಚ್ಚ ಮಾಡಲು ಮತ್ತು ಮರು ಟೆಂಡರ್ ಕರೆಯುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:– ವಿಷಯವನ್ನು ದೀರ್ಘವಾಗಿ ಚರ್ಚಿಸಿ Energy mangement system to Street lights ಒಂದಕ್ಕೆ 10ಲಕ್ಷ (ಹತ್ತು ಲಕ್ಷ) ರೂ.ಗಳನ್ನು ಉಪಯೋಗಿಸಿಕೊಳ್ಳಲು ತಾಂತ್ರಿಕ ಅನುಮೋದನೆ ಪಡೆದು ಮರು ಟೆಂಡರ್ ಕರೆಯಲು, ಹಾಗೂ ಈ ಕೆಳಕಂಡ ಪ್ರದೇಶಗಳಲ್ಲಿ– ಬೆಂಗಳೂರು ಮೈಸೂರು ರಸ್ತೆ , ಶಿವಪುರ , ಹೊಸ ಮತ್ತು ಹಳೆ ಕೊಪ್ಪ ರಸ್ತೆ ,ಲೀಲಾವತಿ ಬಡಾವಣೆ, ರಾಮ್ ರಹೀಂ ನಗರ , ವಿ.ವಿ.ನಗರ ,ವೈದ್ಯನಾಥಪುರ ರಸ್ತೆ , ಪೂರ್ವ ಮತ್ತು ಪಶ್ಚಿಮ ಗೊರವನಹಳ್ಳಿ ರಸ್ತೆ, ಶಿಕ್ಷಕರ ಬಡಾವಣೆ, ಮಳವಳ್ಳಿ ರಸ್ತೆ , ಚನ್ನೇಗೌಡನದೊಡ್ಡಿ ಎಸ್.ಬಿ.ರಸ್ತೆ,

ಹೊಳೆ ಬೀದಿ , ಹಳೇ ಎಂ.ಸಿ.ರಸ್ತೆ, ಅಳವಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 16/7 :– ಮದ್ದೂರು ಪ್ರಾಂತೀಯ ನೀರು ಸರಬರಾಜು ಯೋಜನೆಯಲ್ಲಿ ಕೆ.ಎಂ.ದೊಡ್ಡಿ ಬಾಚನಹಳ್ಳಿ , ಹಾಗೂ ಶಿವನಸಮುದ್ರದ ಪಂಪ್ ಹೌಸ್ ನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಹೊರಗುತ್ತಿಗೆಯ ಮುಖಾಂತರ ಕೆ.ಯು.ಡಬ್ಲ್ಯು.ಎಸ್.ಡಿ.ಬಿ.ನಿರ್ವಹಿಸುತ್ತಿದ್ದೂ ಅದಕ್ಕ ತಗಲುವ ವೆಚ್ಚವನ್ನು ಪುರಸಭೆ ಭರಿಸುತ್ತಿದ್ದೂ, ಇತ್ತೀಚೆಗೆ ಮಂಡಳಿಯವರು ಪತ್ರಬರೆದು (ಸಂಖ್ಯೆ:ಕಜಮ/ಸಕಾಅ/ಮದ್ದೂರು ಹೆಚ್.ಆರ್.ಡಿ–1/2007–08 ದಿನಾಂಕ:16–01–2008 ಈ ಪುರಸಭೆ ಕಛೇರಿಯಿಂದಲೆ ಪಾವತಿಸಲು ಕೋರಿರುವ ವಿಚಾರ.

ತೀರ್ಮಾನ:–ವಿಷಯವನ್ನು ಚರ್ಚಿಸಲಾಯಿತು. ಪ್ರಾಂತೀಯ ನೀರು ಸರಬರಾಜು ಯೋಜನೆಯ ಸಿಬ್ಬಂದಿಗಳಿಗೆ ಕೆ.ಯು.ಡಬ್ಲ್ಯು.ಎಸ್.ವತಿಯಿಂದ ಹೊರಗುತ್ತಿಗೆಯ ಮುಖಾಂತರ ಪಾವತಿಸುತ್ತಿದ್ದೂ, ಮೇಲ್ಕಂಡ ಪತ್ರದ ಅನ್ವಯ ಪುರಸಭೆಯು ಪಾವತಿಸಬೇಕಾಗಿರುತ್ತದೆ. ಅಲ್ಲದೆ ಮಾನ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ ಮುನಿಸಿ(2) 152/04–05 ದಿನಾಂಕ:09–08–2006 ರ ಅನ್ವಯ ಪುರಸಭೆಗೆ ನೇರವಾಗಿ ಸಿಬ್ಬಂದಿ ತೆಗೆದುಕೊಳ್ಳಲು ಅವಕಾಶ ವಿರುವುದಿಲ್ಲ ಕಾನೂನು ರೀತ್ಯಾ ಟೆಂಡರ್ ಕರೆದು ಹೊರ ಗುತ್ತಿಗೆ ( out source) ಮೂಲಕ ತೆಗೆದುಕೊಂಡು ನೀರು ಸರಬರಾಜು ನಿರ್ವಹಣೆಯನ್ನು ನಿರ್ವಹಿಸಲು ಅಥವಾ ಕೆ.ಯು.ಡಬ್ಲ್ಯು. ಎಸ್. ಡಿ.ಬಿ.ರವರ ಮೂಲಕ ವೇತನ ಪಾವತಿಸಲು ಸೂಚಿಸಿರುತ್ತಾರೆ ಅದರಂತೆ, ಪುರಸಭೆ ವತಿಯಿಂದ ಟೆಂಡರ್ ಕರೆದು ಹಾಲಿ ಕೆಲಸ ನಿರ್ವಹಿಸುತ್ತಿರುವವರು ಎಲ್ ಅಂಡ್ ಟಿ ಕಂಪನಿಯಿಂದ ತರಬೇತಿ ಪಡೆದವರಾದ್ದರಿಂದ ಅವರಿಗೆ ಆದ್ಯತೆ ನೀಡಿ ನಿರ್ವಹಣೆ ಮಾಡಲು ಸಭೆ ತೀರ್ಮಾನಿಸಿತು.

ವಿಷಯ: 16/8:– ಶಿವಪುರದ ಸತ್ಯಾಗ್ರಹ ಸೌಧದ ಪಕ್ಕದ ಬೀದಿಯಲ್ಲಿ ಮಳೆಯಿಂದ ಚರಂಡಿ ನೀರು ಮನೆಗೆ ಹರಿದು

ಸಾರ್ವಜನಿಕರಿಗೆ ತೊಂದರೆಯಾಗಿದ್ದು ಚರಂಡಿಯನ್ನು ಎತ್ತರಿಸುವ ಕೆಲಸವನ್ನು ತುರ್ತಾಗಿ ಸರ್ಕಾರಿ ಆದೇಶ ಸಂಖ್ಯೆ ನಅಇ 43 ಟಿ.ಎಂ.ಎಸ್.2004 ಬೆಂಗಳೂರು ದಿನಾಂಕ 07–07–2004 ರಂತೆ ಕೊಡುವ ಬಗ್ಗೆ ಚರ್ಚಿಸುವ ವಿಚಾರ

ತೀರ್ಮಾನ:- ವಿಷಯವನ್ನು ಚರ್ಚಿಸಲಾಯಿತು. 2008ನೇ ಇಸವಿ ಮೇ ತಿಂಗಳಿನಲ್ಲಿ ಬಾರಿ ಮಳೆ ಬಿದ್ದು ಚರಂಡಿಯ ನೀರು ಮನೆಗೆ ಹರಿದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದ್ದುದ್ದನ್ನು ಶಿವಪುರದ ಸದಸ್ಯರು ತಿಳಿಸಿರುವ ಮೇರೆಗೆ ತುರ್ತಾಗಿ ಅಂದಾಜು ತಯಾರಿಸಿ ಕೆಲಸವನ್ನು ನಿರ್ಮಿಸಲು ಸಭೆಯು ತೀರ್ಮಾನಿಸಿತು.

ವಿಷಯ:-16/9:- ಹಳೆ ಎಂ.ಸಿ. ರಸ್ತೆಯಲ್ಲಿ PWD ಕಛೇರಿಯ ಹತ್ತಿರ ಇರುವ OHT ಯ ವಾಲ್ವ್ ಛೆಂಬರ್‌ಗಳು ಹಾಗೂ ಫೆನ್ಸಿಂಗ್ ರಸ್ತೆಯ ಮೂಲೆಯಲ್ಲಿದ್ದು ತಿರುಗಾಡಲು ತುಂಬಾ ತೊಂದರೆಯಾಗಿದ್ದು, ರಸ್ತೆಯಲ್ಲಿ ವಾಹನಗಳು ಸುಗಮವಾಗಿ ತಿರುಗಾಡಲು ಅವಕಾಶ ಮಾಡಲು ಚರ್ಚಿಸುವ ವಿಚಾರ.

ತೀರ್ಮಾನ :- ಚರ್ಚಿಸಲಾಯಿತು. ತುರ್ತಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ:-16/10 ಪುರಸಭೆಯ ಎಲ್ಲಾ 23 ವಾರ್ಡುಗಳಲ್ಲಿ ದೊಡ್ಡ ಚರಂಡಿಗಳಲ್ಲಿ ಹೂಳು ತುಂಬಿದ್ದು ನೀರು ಸರಿಯಾಗಿ ಹರಿಯದೆ ಸಾರ್ವಜನಿಕರಿಗೆ ರೋಗ ರುಜಿನಗಳು ಬರುವುದರಿಂದ, ಕಾಮಗಾರಿ ಶಾಖೆಯಿಂದ ಇಂತಹ ಚರಂಡಿಯ ಹೂಳು ತೆಗೆಯಲು ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುವ ವಿಚಾರ.

ತೀರ್ಮಾನ:- ವಿಷಯವನ್ನು ಚರ್ಚಿಸಲಾಯಿತು. ವಾರ್ಡಿನ ಸದಸ್ಯರುಗಳು ಆರೋಗ್ಯ ಶಾಖೆಯಿಂದ ದೊಡ್ಡ ಚರಂಡಿಗಳ ಹೂಳನ್ನು ತೆಗೆಯಲು ಸಾದ್ಯವಾಗುವುದಿಲ್ಲ. ಅದುದರಿಂದ ಕಾಮಗಾರಿ ಶಾಖೆಯಿಂದ ಅಂದಾಜು ತಯಾರಿಸಿ ಕ್ರಮವಹಿಸುವುದು ಎಂದೂ ಸಭೆ ತೀರ್ಮಾನಿಸಿತು.

ವಿಷಯ:-16/11:- ಖಾಸಗಿ ಬಸ್ ನಿಲ್ದಾಣ ವಿದ್ಯುತ್ ಬಿಲ್ ಬಾಕಿಯನ್ನು ಬೀದಿ ದೀಪ ಶೀರ್ಷಿಕೆಯಲ್ಲಿ ಪಾವತಿಸಲು, ಹಾಲಿಯಿರುವ ವಿದ್ಯುತ್ ಮೀಟರ್ ಬೀದಿ ದೀಪಗಳಿಗೆ ಮೀಸಲಾಗಿಟ್ಟು ಮತ್ತು ಬಸ್ ನಿಲ್ದಾಣದ ಆವರಣದಲ್ಲಿರುವ 7 ( ಏಳು) ಅಂಗಡಿಗಳಿಗೆ ಪ್ರತ್ಯೇಕವಾಗಿ ಹೊಸ ವಿದ್ಯುತ್ ಮೀಟರ್‌ನ್ನು ಅಳವಡಿಸಲು ಚರ್ಚಿಸುವ ವಿಚಾರ.

ತೀರ್ಮಾನ:- ವಿಷಯವನ್ನು ದೀರ್ಘವಾಗಿ ಚರ್ಚಿಸಿ ಚೆಸ್ಕಾಂ ನಲ್ಲಿರುವ ಹೆಚ್ಚುವರಿ ಮೊತ್ತದಲ್ಲಿ ಬಾಕಿಯನ್ನು ಭರಿಸಲು ಮತ್ತು 7 (ಏಳು) ಅಂಗಡಿಗಳಿಗೆ ಪತ್ಯೇಕವಾಗಿ ಹೊಸ ವಿದ್ಯುತ್ ಮೀಟರ್‌ನ್ನು ಅಳವಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ: 16/12:- ಅಧ್ಯಕ್ಷರು/ಕಾರ್ಯದರ್ಶಿ, ಭಾರತ್ ವಿಕಾಸ್ ಪರಿಷತ್ (ಸೇವಾ ಸಂಸ್ಥೆ) ಕದಂಬ ಶಾಖೆ ಮದ್ದೂರು ಮಂಡ್ಯ ಜಿಲ್ಲೆರವರು ದಿನಾಂಕ:28/06/2008 ಮತ್ತು 29/06/08 ರಂದು ಎರಡು ದಿವಸ

ರಾಜ್ಯ ಮಟ್ಟದ ಕಾರ್ಯಗಾರಕ್ಕೆ ರೂ. 10,000–00 ಧನ ಸಹಾಯ ಕೋರಿ ಕೊಟ್ಟಿರುವ ಮನವಿಯನ್ನು ಪರಿಶೀಲಿಸಿ, ತೀರ್ಮಾನ ಕೈಗೊಳ್ಳುವ ವಿಚಾರ

ತೀರ್ಮಾನ: ಸಭೆಯಲ್ಲಿ ಚರ್ಚಿಸಲಾಯಿತು. ರೂ.10,000–00 ಗಳನ್ನು ಪಾವತಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಕ್ರಮ ಕೈಗೊಳ್ಳಲು ಸಭಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ:16/12:–ಅಧ್ಯಕರು/ ಕಾರ್ಯದರ್ಶಿ, ಭಾರತ್ ವಿಕಾಸ್ ಪರಿಷತ್ (ಸೇವಾ ಸಂಸ್ಥೆ) ಕದಂಬ ಶಾಖೆ ಮದ್ದೂರು ಮಂಡ್ಯ ಜಿಲ್ಲೆ ರವರು ದಿನಾಂಕ:31–05–2008 ರಂದು ಮನವಿ ಸಲ್ಲಿಸಿ ದಿನಾಂಕ:28–06–2008 ಮತ್ತು 29–06–2008ರಂದು ಎರಡು ದಿವಸ ರಾಜ್ಯ ಮಟ್ಟದ ಕಾರ್ಯಗಾರಕ್ಕೆ ಧನ 10,000–00ಸಾವಿರ ರೂ. ಕಂದಾಯ ನೀಡುವ ಬಗ್ಗೆ ಕೋರಿ ಕೊಟ್ಟಿರುವ ಮನವಿಯನ್ನು ಪರಿಶೀಲಿಸಿ, ತೀರ್ಮಾನ ಕೈಗೊಳ್ಳುವ ವಿಚಾರ.

ವಿಷಯ:–16/13:– ಸಂಚಾಲಕರು, ಕರ್ನಾಟಕ ಜನಪರ ವೇದಿಕೆ ಮದ್ದೂರು ರವರು ದಿನಾಂಕ:1–04–2008 ರಂದು ಮನವಿ ಸಲ್ಲಿಸಿ ದಿನಾಂಕ:20–4–2008 ರಂದು ಅಂಬೇಡ್ಕರ್ ಜಯಂತಿ ಆಚರಣೆಗಾಗಿ ಪುರಸಭೆಯಿಂದ ಧನಸಹಾಯ ಕೋರಿರುವ ವಿಚಾರ.

ತೀರ್ಮಾನ: ಸಭೆಯಲ್ಲಿ ಚರ್ಚಿಸಲಾಯಿತು. ಈ ಸಂಘವು ನೊಂದಣಿಯಾಗಿದ್ದಲ್ಲಿ ಪುರಸಭೆಯಿಂದ 500–00(ಐದು ನೂರು) ಧನ ಸಹಾಯ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ವಿಷಯ:–16/14:–ಶ್ರೀ ನಿಂಗಯ್ಯ, ಸದಸ್ಯರು ಪುರಸಭೆ ಮದ್ದೂರು ಹಾಗೂ 23ನೇ ವಾರ್ಡ್‌ನ ನಿವಾಸಿಗಳು ದಿನಾಂಕ: 29–05–2008 ರಂದು ಮನವಿ ಸಲ್ಲಿಸಿ ಮದ್ದೂರು ಪಟ್ಟಣ ವಾರ್ಡ್23ರ ಹೊಸ ಬಡಾವಣೆಗೆ ಡಾ: ರಾಜ್ ಕುಮಾರ್ ಬಡಾವಣೆ ಎಂದು ನಾಮಕರಣ ಮಾಡುವ ಬಗ್ಗೆ .

ತೀರ್ಮಾನ:–ಚರ್ಚಿಸಲಾಯಿತು. ಸದರಿ ಬಡಾವಣೆಗೆ ಡಾ:ರಾಜ್ ಕುಮಾರ್ ರವರ ಹೆಸರು ನಾಮಕರಣ ಮಾಡುವ ಬಗ್ಗೆ ಸರ್ಕಾರದಿಂದ ಮಂಜೂರಾತಿ ಪಡೆದು ಕ್ರಮಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ:–16/15:–ಕೆ.ಇ.ಬಿ ಹಿಂಭಾಗ, ಸಿದ್ದಾರ್ಥನಗರದಲ್ಲಿರುವ ಅಂಗನವಾಡಿ ಕಟ್ಟಡವನ್ನು ದುರಸ್ಥಿ ಪಡಿಸುವ ಬಗ್ಗೆ.

ತೀರ್ಮಾನ:– ಚರ್ಚಿಸಲಾಯಿತು. ದುರಸ್ಥಿ ಕಾಮಗಾರಿಯನ್ನು ಶೇ.18ರ ಕ್ರಿಯಾಯೋಜನೆಯಲ್ಲಿ ಸೇರ್ಪಡೆ ಮಾಡಿಕೊಂಡು ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.